# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮೇ 05 , 2022

ಸಂಪುಟ : 48 ಸಂಚಿಕೆ : 354 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಬಸವಾದಿ ಶಿವಶರಣರ ಅಧ್ಯಯನ ಅಗತ್ಯ

## ಬಸವ ಜಯಂತಿ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರು

ದಾವಣಗೆರೆ, ಮೇ 4 - ಹಿಂದಿನ ದಿನಗಳಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಖ್ಯಾತಿಯಾಗಿದ್ದ ದಾವಣಗೆರೆ ನಗರ ಕ್ರಮೇಣವಾಗಿ ಶಿಕ್ಷಣ ನಗರಿಯಾಗಿ, ತದನಂತರ ಬೆಣ್ಣೆನಗರಿ ಎಂದು ಕರೆಯಲ್ಪಡಪಡುವಂತಾಯಿತು. ದಾವಣಗೆರೆಯನ್ನು 'ಸಾಂಸ್ಕೃತಿಕ ನಗರಿ' ಎಂದು ಶಾಶ್ವತವಾಗಿ ಉಳಿಸಿಕೊಳ್ಳುವಂತಾಗಬೇಕು. ಆಗ ಅದಕ್ಕೆ ಗೌರವ, ಘನತೆ ಹೆಚ್ಚುತ್ತದೆ ಎಂಬ ಆಶಯವನ್ನು ಡಾ. ಶಿವಮೂರ್ತಿ ಮುರುಘಾ ಶರಣರು ವ್ಯಕ್ತಪಡಿಸಿದರು.

ಬಸವ ಜಯಂತ್ಯೋತ್ಸವ ಸಮಿತಿ, ಲಿಂಗಾಯತ ತರುಣ ಸಂಘ, ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಸಹಯೋಗದಲ್ಲಿ ನಗರದ ಶಿವಯೋಗಾಶ್ರಮದ ಆವರಣದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶರಣರು ಮಾತನಾಡಿದರು.

ಪ್ರಸ್ತುತ ಜಾಗತಿಕ ಮಟ್ಟದಲ್ಲೂ ವಿಶ್ವಗುರು ಬಸವಣ್ಣನವರ ಸ್ಮರಣೆ ಮಾಡುತ್ತಿದ್ದು, ಬಸವಣ್ಣನವರ ಇತಿಹಾಸ, ಪರಂಪರೆಯ ಅಧ್ಯಯನ ನಡೆಯಬೇಕು. ಸಾಧ್ಯವಾದರೆ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ನಮ್ಮದಾಗಬೇಕು ಎಂದರು.

ಬಸವಣ್ಣನವರ, ಶಿವಶರಣರ ಶಕ್ತಿ ಸಾಮರ್ಥ್ಯದ ಅರಿವಾಗಬೇಕೆಂದರೆ ಬಸವ ತತ್ವ ಮತ್ತು ವಚನಗಳ ನಿರಂತರ ಅಧ್ಯಯನ ಮಾಡಬೇಕು. ಜೀವನದಲ್ಲಿ ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಳ್ಳುವ ಸಂದರ್ಭಗಳನ್ನು ಮತ್ತೆ ಮತ್ತೆ ತಂದುಕೊಳ್ಳಬೇಕಾಗಿದೆ ಎಂದು ಹಿತ ನುಡಿದರು.

ಬಸವಣ್ಣನವರು ಈ ಭೂಮಿಗೆ ಬಂದು ಹೋಗಿ 900 ವರ್ಷಗಳು ಸಂದಿವೆ. ಚನ್ನಬಸವಣ್ಣ ದಿವ್ಯ ಜ್ಞಾನಿಗಳು, ಬಸವಣ್ಣ ತ್ರಿಕಾಲ ಜ್ಞಾನಿಗಳು. ಅವರು ಬಿತ್ತಿದ ತತ್ವಗಳು ಇಂದು ಪಲ್ಲವಿಸುತ್ತಿವೆ. ಬೆಳೆ ಕೊಡುತ್ತಿವೆ. ಬಸವಣ್ಣನವರದು ಸಾಂಸ್ಕೃತಿಕ, ಸಮಾನತೆಯ, ಸ್ವಾಭಿಮಾನದ ಇತಿಹಾಸವಾಗಿದೆ.

### ಸಾರೋಟದಲ್ಲಿ ಶರಣರ ಮೆರವಣಿಗೆ ಮಾಡುವಾಸೆ : ಅಜಯಕುಮಾರ್

ದಾವಣಗೆರೆ, ಮೇ 4 - ಈ ಬಾರಿ ಪ್ರಥಮ ಬಾರಿ ಬಸವ ಜಯಂತಿ ಆಚರಿಸಿದ ನೆಲದಲ್ಲಿ ಬೃಹತ್ ಬಸವ ಜಯಂತಿಯನ್ನು ಆಚರಿಸಬೇಕೆಂಬ ಹಂಬಲ ಈಡೇರಿದೆ. ಆದರೆ ಮುರುಘಾ ಶರಣರೂ ಸೇರಿದಂತೆ, ಎಲ್ಲಾ ಸಮುದಾಯದ ಸ್ವಾಮೀಜಿಗಳನ್ನು ಸಾರೋಟದಲ್ಲಿ ಮೆರವಣಿಗೆ ಮೂಲಕ ಕರೆ ತರುವ ಪ್ರಯತ್ನದಲ್ಲಿ ನಾನು ವಿಫಲವಾಗಿದ್ದು, ಮುಂದಿನ ವರ್ಷ ಆ ಆಸೆ ಈಡೇರುವಂತಾಗಲಿ ಎಂದು ಬಸವ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ತಮ್ಮ ಇಂಗಿತ ವ್ಯಕ್ತಪಡಿಸಿದರು.

ಶಿವಯೋಗಾಶ್ರಮದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ವ ಸಮಾಜಗಳ ಮುಖಂಡರ ಸಹಕಾರದೊಂದಿಗೆ ಬಸವ ಜಯಂತಿ ಉತ್ಸವ ಯಶಸ್ಸು ಕಂಡಿದೆ. ಇದಕ್ಕೆ ಮುರುಘಾ ಶರಣರ ಆಶೀರ್ವಾದ ಕಾರಣ ಎಂದರು.

ಬಸವ ಜಯಂತಿ ಆಚರಣೆ, ಉತ್ಸವದ ಜವಾಬ್ದಾರಿ ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯದ ಫಲ ಎಂದು ಹೇಳಿದರು.

ಬಸವಾದಿ ಶರಣರನ್ನು ಅಧ್ಯಯನ ಮಾಡಬೇಕಾಗಿದೆ ಎಂದು ಹೇಳಿದರು.

ಎಲ್ಲ ದೇಶಗಳ ಸಂಸದೀಯ ವ್ಯವಸ್ಥೆಗೂ ಮುನ್ನ ಸಂಸದೀಯ (2ನೇ ಪುಟಕ್ಕೆ)

# ನಗರ ಸ್ಥಳೀಯ ಸಂಸ್ಥೆಗಳಿಗೆ 1519 ಕೋಟಿ ರೂ.ಬಿಡುಗಡೆ

ಬೆಂಗಳೂರು, ಮೇ 4 - ರಾಜ್ಯದ 15 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯ 4ನೇ ಹಂತದಲ್ಲಿ 1519.43 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಿರುವ ವಿವಿಧ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ.ನಾಗರಾಜು ಅವರ ಅಧ್ಯಕ್ಷತೆಯ ರಾಜ್ಯ ಮಟ್ಟದ ಸಮಿತಿ ಅನುಮೋದನೆ ನೀಡಿದೆ.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ-4ನೇ ಹಂತದ ಯೋಜನೆಗಳ 19ನೇ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆ ದೊರೆತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಂಡ್ಯ ಜಿಲ್ಲೆ, ಕೋಲಾರ, ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ ನಗರಸಭೆ ಹೊರತುಪಡಿಸಿ), ದಕ್ಷಿಣ ಕನ್ನಡ (ಉಳ್ಳಾಲ ನಗರಸಭೆ, ಸೋಮೇಶ್ವರ ಮತ್ತು ಕೋಟೆಕಾರು ಪಟ್ಟಣ ಪಂಚಾಯಿತಿ ಹೊರತುಪಡಿಸಿ), ಧಾರವಾಡ, ಗದಗ (ಗದಗ-ಬೆಟಗೇರಿ ನಗರಸಭೆ ಹೊರತುಪಡಿಸಿ), ಕೊಪ್ಪಳ, ಹಾವೇರಿ (ಶಿಗ್ಗಾಂವ, ಬಂಕಾಪುರ, ಸವಣೂರು ಪುರಸಭೆ ಹೊರತುಪಡಿಸಿ), ರಾಯಚೂರು (ಮಾನ್ವಿ, ಜಾಲಹಳ್ಳಿ ಪುರಸಭೆ ಮತ್ತು ಕವಿತಾಳ ಪಟ್ಟಣ ಪಂಚಾಯಿತಿಯಿ ಹೊರತುಪಡಿಸಿ), ಯಾದಗಿರಿ, ಬೀದರ್, ಶಿವಮೊಗ್ಗ, ಬಾಗಲಕೋಟೆ, ಉತ್ತರ ಕನ್ನಡ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2022-23 ರಿಂದ 2024-25ನೇ ಸಾಲಿನ ಆರ್ಥಿಕ ವರ್ಷದವರೆಗೆ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ: 80.34 ಕೋಟಿ ರೂಪಾಯಿಗಳು, ಮಂಡ್ಯ ಜಿಲ್ಲೆ: 89.25 ಕೋಟಿ ರೂಪಾಯಿಗಳು, ಕೋಲಾರ ಜಿಲ್ಲೆ: (3ನೇ ಪುಟಕ್ಕೆ)

## ಬಡ್ಡಿ ದರ ಹೆಚ್ಚಿಸಿದ ರಿಸರ್ವ್ ಬ್ಯಾಂಕ್

ಮುಂಬೈ, ಮೇ 4 – ರಿಸರ್ವ್ ಬ್ಯಾಂಕ್ ಸಾಲದ ದರಗಳನ್ನು 40 ಮೂಲ ಅಂಕಗಳಷ್ಟು ಹೆಚ್ಚಿಸಿದ್ದು, ಶೇ.4.40ಕ್ಕೆ ನಿಗದಿ ಪಡಿಸಿದೆ. ಇದರಿಂದಾಗಿ ಸಾಲದ ಬಡ್ಡಿ ದರಗಳು ಹೆಚ್ಚಾಗಲಿವೆ. ಹಣದುಬ್ಬರ ಸತತ ಮೂರು ತಿಂಗಳಿಂದ ಶೇ.6ಕ್ಕಿಂತ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆ ನಡೆಸಿ ಬಡ್ಡಿ ದರಗಳನ್ನು ಹೆಚ್ಚಿಸಿದೆ.

ಮೇ 21ರಿಂದ ಜಾರಿಗೆ ಬರುವಂತೆ ನಗದು ಮೀಸಲು ಪ್ರಮಾಣವನ್ನು ಶೇ.0.50ರಷ್ಟು ಹೆಚ್ಚಿಸಿ ಶೇ.4.5ಕ್ಕೆ ನಿಗದಿ ಪಡಿಸಲಾಗಿದೆ. ಇದರಿಂದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ 87 ಸಾವಿರ ಕೋಟಿ ರೂ.ಗಳ ನಗದು ಹರಿವು ಕಡಿಮೆಯಾಗಲಿದೆ.

ಆಗಸ್ಟ್ 2018ರ ನಂತರ ಮೊದಲ ಬಾರಿಗೆ ಬಡ್ಡಿ ದರವನ್ನು ಹೆಚ್ಚಿಸಲಾಗಿದೆ. ಇದೇ (3ನೇ ಪುಟಕ್ಕೆ)

## 6 ಲಕ್ಷ ಹೆಕ್ಟೇರ್ ಭೂಮಿ ಹಕ್ಕುಪತ್ರ: ಅಶೋಕ್

ಬೆಂಗಳೂರು, ಮೇ 4 - ಅರಣ್ಯ ಇಲಾಖೆ ವಶದಲ್ಲಿರುವ ಆರು ಲಕ್ಷ ಹೆಕ್ಟೇರ್ ಭೂಮಿಯನ್ನು ಕಂದಾಯ ಇಲಾಖೆಗೆ ಹಿಂತಿರುಗಿಸಲಾಗಿದ್ದು, ಉಳುಮೆದಾರರಿಗೆ ಹಕ್ಕುಪತ್ರ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.

ಅಷ್ಟೇ ಅಲ್ಲ ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂದಾಯ ಭೂಮಿ ಒತ್ತುವರಿ ಮಾಡಿ ಕಾಫಿ ತೋಟ ಮಾಡಿಕೊಂಡಿರುವ 92 ಸಾವಿರ ಎಕರೆ ಭೂಮಿಗೂ ತಾತ್ಕಾಲಿಕ ಮೋಕ್ಷ ದೊರೆತಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗಿನಲ್ಲಿ 12 ಸಾವಿರ, ಹಾಸನದಲ್ಲಿ 35 ಹಾಗೂ ಚಿಕ್ಕಮಗಳೂರಿನಲ್ಲಿ 45 ಸಾವಿರ ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು (3ನೇ ಪುಟಕ್ಕೆ)

# ಬಸವಣ್ಣನವರ ಚಿಂತನಗಳು ಸಾರ್ವಕಾಲಿಕ ಪ್ರಸ್ತುತ



**ಬಸವಣ್ಣನವರ ಷಟ್ ಸ್ಥಲ ವಚನಗಳ ಹಿಂದಿ ಭಾಷಾ ಆವೃತ್ತಿಯನ್ನು ಲೋಕಾರ್ಪಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ**

ಬೆಂಗಳೂರು, ಮೇ 4- ಇಲ್ಲಿನ ತರಳಬಾಳು ಕೇಂದ್ರದಲ್ಲಿ ಇಂದು ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಬಸವಣ್ಣನವರ ಷಟ್ ಸ್ಥಲ ವಚನಗಳ ಹಿಂದಿ ಭಾಷಾ ಆವೃತ್ತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಮೌಲ್ಯಗಳು ಕುಸಿಯುತ್ತಿವೆ. ಇಂತಹ ಸಂದರ್ಭದಲ್ಲಿ ಬಸವಾದಿ ಶರಣರು ಸಾರಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಕೊಂಡರೆ ಸುಂದರ ಸಮಾಜ ನಿರ್ಮಾಣ ಮಾಡಲು ಸಾಧ್ಯವಿದೆ. ಬಸವಣ್ಣನವರ ಚಿಂತನೆಗಳು ಸಾರ್ವಕಾಲಿಕ ಪ್ರಸ್ತುತ ಎಂದು ತಿಳಿಸಿದರು.

ಜ್ಞಾನ, ತತ್ವಜ್ಞಾನ , ವಿಜ್ಞಾನ, ತಂತ್ರಜ್ಞಾನಗಳ ಸಂಗಮದಂತಿರುವ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ, ನಿತ್ಯ ನಿರಂತರವಾದ ಜ್ಞಾನದ ಹಸಿವುಳ್ಳವರ. ತಂತ್ರಜ್ಞಾನದ ಮೂಲಕ ವಚನ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಜಾಲತಾಣ ರೂಪಿಸುವುದರ ಮೂಲಕ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದಾರೆ. ವಚನ ಸಾಹಿತ್ಯವನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಿಸಿರುವುದು ಶ್ಲಾಘನೀಯ ಕಾರ್ಯ ಎಂದು ಬೊಮ್ಮಾಯಿ ಹೇಳಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಹಿರಿಯ ಗುರುಗಳು ಸಮಯ ಪಾಲನೆಗೆ ಬಹಳ ಮಹತ್ವ ನೀಡಿದ್ದರು. ಸಮಯ ಪಾಲನೆ ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಜೊತೆಗೆ ಹಾಸ್ಯ ಪ್ರವೃತ್ತಿಯುಳ್ಳವರಾಗಿದ್ದರು. (2ನೇ ಪುಟಕ್ಕೆ)

## ರೈತರಿಂದಲೇ ರಾಗಿ ಖರೀದಿಸುವಂತೆ ಸೂಚನೆ

ದಾವಣಗೆರೆ, ಮೇ 4- ಬೆಂಬಲ ಬೆಲೆಯಲ್ಲಿ ಸರ್ಕಾರದಿಂದ ರಾಗಿ ಖರೀದಿಸುತ್ತಿದ್ದು ನೈಜ ರೈತರಿಂದ ರಾಗಿ ಖರೀದಿಸಿ ದಲ್ಲಾಳಿಗಳು, ಮಧ್ಯವರ್ತಿಗಳು, ವ್ಯಾಪಾರಸ್ಥರನ್ನು ದೂರವಿಡಿ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಆರ್ ಉಮಾ ಶಂಕರ್ ಹೇಳಿದರು.

**ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಮಾಶಂಕರ್**

ಜಿಲ್ಲಾಡಳಿತ ಭವನದಲ್ಲಿ ಬುಧವಾರ ನಡೆದ ಕೋವಿಡ್ ಪರಿಸ್ಥಿತಿ ಪರಿಶೀಲನೆ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಫ್ರೂಟ್ಸ್ ತಂತ್ರಾಂಶದಲ್ಲಿ ಎಲ್ಲ ರೈತರು ನೋಂದಣಿ ಮಾಡಿಕೊಳ್ಳಲು ರೈತರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು.

ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು ವಿಶೇಷ ಡ್ರೈವ್ ಮಾಡುವ ಮೂಲಕ ರೈತರಿಗೆ ಇದರಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಮುಂದಿನ ದಿನಗಳಲ್ಲಿ ರೈತರಿಗೆ ಗೊಬ್ಬರ, ಬೀಜ, ಇನ್‌ಪುಟ್ ಸಬ್ಸಿಡಿ, ಮಾಹಿತಿ ಎಲ್ಲವೂ ಫ್ರೂಟ್ಸ್ ತಂತ್ರಾಂಶದ ಮೂಲಕವೇ ರೈತರಿಗೆ ಸಿಗಲಿವೆ. ಹಾಗಾಗಿ ಫ್ರೂಟ್ ತಂತ್ರಾಂಶದ ಬಗ್ಗೆ ಉಪವಿಭಾಗಾಧಿಕಾರಿಗಳು ಗಮನಹರಿಸಿ ಮತ್ತು ಕುಡಿಯುವ ನೀರಿನ ಬಗೆಗೆ ಒಂದು ವಾರದೊಳಗೆ ಸರ್ವೆ ಮಾಡಿ ಮಾಹಿತಿ ನೀಡಲು ಸೂಚಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯವ ನೀರಿನ ಸಮಸ್ಯೆ ಇಲ್ಲ. ಯಾವುದೇ ಖಾಸಗಿ ಬೋರ್‌ವೆಲ್‌ಗಳನ್ನು ತೆಗೆದುಕೊಂಡಿಲ್ಲ. ಒಂದು ವೇಳೆ ಮಳೆ ತಡವಾದರೆ ಸಮಸ್ಯಾತ್ಮಕ ಹಳ್ಳಿಗಳ ಪಟ್ಟಿಯನ್ನು ಜಿ.ಪಂ ಸಿಇಓ ಸಿದ್ದಪಡಿಸಿಕೊಂಡಿದ್ದು, ಅದರಂತೆ ಸಮಸ್ಯೆ ನಿವಾರಿಸಲಾಗುವುದು ಎಂದರು. (2ನೇ ಪುಟಕ್ಕೆ)

## ಬಡ್ಡಿ ದರ ಹೆಚ್ಚಳದ ನಂತರ ಷೇರು ಪೇಟೆ ಶೇ.2ರಷ್ಟು ಕುಸಿತ

ಮುಂಬೈ, ಮೇ 4 – ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಹೆಚ್ಚಿಸಿರುವುದು ಷೇರು ಪೇಟೆಯ ಮೇಲೆ ಪರಿಣಾಮ ಬೀರಿದ್ದು, ಮುಂಬೈ ಷೇರು ಸೂಚ್ಯಂಕ ಹಾಗೂ ನಿಫ್ಟಿ ಎರಡೂ ಶೇ.2ರ ಕುಸಿತ ಕಂಡಿವೆ.

ಬಿ.ಎಸ್.ಇ. ಸೂಚ್ಯಂಕ 1,306.96 ಅಂಕಗಳ (3ನೇ ಪುಟಕ್ಕೆ)

## ಎಸ್.ವಿ. ವಿಜಯಕುಮಾರ್ ನಿಧನ



ದಾವಣಗೆರೆ ಹದಡಿ ರಸ್ತೆ 6ನೇ ಕ್ರಾಸ್ ಶ್ರೀನಿವಾಸ ನಗರ ವಾಸಿ **ದಿ. ಶ್ರೀ ಗರಗದ ಶಿವನಿ ಗೌಡ್ರು ವೀರಣ್ಣ** ಇವರ ಪುತ್ರ **ಶ್ರೀ ಎಸ್.ವಿ. ವಿಜಯಕುಮಾರ್** ಅವರು ದಿನಾಂಕ 04.05.2022ರ ಬುಧವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.05.2022ರ ಬುಧವಾರ ಸಂಜೆ 7 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**


## ಬೆಳ್ಳಿ ಹಬ್ಬದ ಸಂಭ್ರಮದಲ್ಲಿ....

MAGOD LASER

**ಮಾಗೋಡ್ ಲೇಸರ್ ಮಷೀನಿಂಗ್ ಪ್ರೈ. ಲಿ.**

ಜಿಗಣಿ ಇಂಡಸ್ಟ್ರಿಯಲ್ ಏರಿಯಾ, ಆನೇಕಲ್, ಬೆಂಗಳೂರು - 560 105.

MAGOD 2022 25 YEARS LASER




ಸಂಸ್ಥಾಪಕರಾದ : ಹೊಳೆಸಿರಿಗೆರೆ ಶ್ರೀ ಮಾಗೊಡು ಬಸಪ್ಪ ಮೇಷ್ಟ್ರು
ಪತ್ನಿ: ಶ್ರೀಮತಿ ಸರೋಜಮ್ಮ ಇವರ ಆಶೀರ್ವಾದದಿಂದ ಹಾಗೂ
ದಿ|| ಕರ್ನಲ್ ಎಂ.ಬಿ. ರವೀಂದ್ರನಾಥ್ ಅವರ
ಮಾರ್ಗದರ್ಶನದಿಂದ ಭಾರತದಲ್ಲೇ ನಂಬರ್ 1 ಲೇಸರ್ ಕಟಿಂಗ್ ಕಂಪನಿಯಾಗಿ ಬೆಳೆದು
25 ವರ್ಷಗಳ ಯಶಸ್ವೀ ಪಯಣಕ್ಕೆ ಹಾರ್ದಿಕ ಶುಭಾಶಯಗಳು...

ಶುಭ ಕೋರುವವರು :

- ಮುದೇಗೌಡ್ರು ಸಿದ್ದರಾಜು ಮತ್ತು ಸಹೋದರರು
- ಶಶಿಶೇಖರ್ ಗದ್ದಿಮಠ ಮತ್ತು ಕುಟುಂಬದವರು
- ಎನ್. ಪ್ರಕಾಶ್, ಕಾವೇರಿ ಬೇಕರ್ಸ್ ಬಾಸ್ಕೆಟ್
- ಗಿರಿಧರ್ ಹೆಚ್.ಓ. ಮತ್ತು ಕುಟುಂಬದವರು
- ಡಿ. ಗೋವಿಂದರಾಜ್, ಚೈತ್ರಾ ಇಂಡಸ್ಟ್ರೀಸ್
- ಕೆ.ಜಿ.ಕೆ. ಚಿದಾನಂದ ಮತ್ತು ಕುಟುಂಬದವರು ಮತ್ತು ಸ್ನೇಹಿತ ವರ್ಗದವರು, ದಾವಣಗೆರೆ.



# ಜಮ್ಮಾಪುರ ಗುಡ್ಡದಲ್ಲಿ ಅಕ್ರಮ ಗಣಿಗಾರಿಕೆ

ಬಿ.ಪಿ.ಸುಭಾನ್



ಜಗಳೂರು, ಮೇ 4 - ತಾಲ್ಲೂಕಿನ ಜಮ್ಮಾಪುರ ಸಮೀಪದ ಗುಡ್ಡದಲ್ಲಿ ರಾತ್ರಿ ಅಕ್ರಮ ಮ್ಯಾಂಗನೀಸ್ ಗಣಿಗಾರಿಕೆ ನಡೆಯುತ್ತಿದ್ದು, ಭಾರೀ ಪ್ರಮಾಣದಲ್ಲಿ ಮ್ಯಾಂಗನೀಸ್ ಅದಿರನ್ನು ಬೇರೆಡೆ ಸಾಗಣೆ ಮಾಡಲಾಗಿದೆ. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಜಾಣ ಕುರುಡಾಗಿದ್ದಾರೆ.

ಕಬ್ಬಿಣದ ಅದಿರಿನ ಕಣಜವಾಗಿರುವ ಗುಡ್ಡದಲ್ಲಿ ಅಕ್ಕಪಕ್ಕದ ಗ್ರಾಮಸ್ಥರಿಗೆ ತಿಳಿಯದಂತೆ ರಾತ್ರಿಯ ಸಮಯದಲ್ಲಿ ತಿಂಗಳಿಂದ ಆಗಾಗ ಹತ್ತಾರು ಹಿಟಾಚಿ, ಜೆಸಿಬಿ ಹಾಗೂ ಟ್ರ್ಯಾಕ್ಟರ್ ಬಳಸಿ ಸಾವಿರಾರು ಟನ್‌ಗಳಷ್ಟು ಅದಿರು ಮತ್ತು ಫಲವತ್ತಾದ ಮಣ್ಣನ್ನು ಗುಡ್ಡದಿಂದ ಬಗೆದು ಹೊರ ತೆಗೆಯಲಾಗಿದೆ. ಹೊರ ತೆಗೆದು ಸಾಗಿಸಿ ಉಳಿದ ಮಣ್ಣನ್ನು ಅಲ್ಲಿಯೇ ಪಕ್ಕದ ಹಳ್ಳದಲ್ಲಿ ಹಾಕಿ ಮುಚ್ಚಲಾಗಿದೆ.

560 ಹೆಕ್ಟೇರ್ ಪ್ರದೇಶದ ಜಮ್ಮಾಪುರ ಗುಡ್ಡ ಅರಣ್ಯ ಇಲಾಖೆಗೆ ಸೇರಿದ್ದು ಮತ್ತು ಭೂವಿಜ್ಞಾನ ಇಲಾಖೆ , ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆ ಸೇರಿದಂತೆ ಯಾವುದೇ ಇಲಾಖೆಗಳ ಪರವಾನಗಿ ಇಲ್ಲದೆ ಎರಡು ತಿಂಗಳುಗಳಿಂದ ಭಾರೀ ಯಂತ್ರಗಳನ್ನು ಬಳಸಿಕೊಂಡು ರಾತ್ರಿ ಸಮಯದಲ್ಲಿ ಗಣಿಗಾರಿಕೆ ಮಾಡಲಾಗುತ್ತಿದೆ . ನಿರಂತರ ಅಕ್ರಮ ಗಣಿಗಾರಿಕೆಯಿಂದ ಗುಡ್ಡದ ಪ್ರದೇಶ ರಾತ್ರೋರಾತ್ರಿ ಕರಗಿಹೋಗಿದ್ದು, ಅರಣ್ಯ ಪ್ರದೇಶದಲ್ಲಿರುವ ಸಾವಿರಾರು ಗಿಡ ಮರಗಳನ್ನು ನಾಶ ಮಾಡಲಾಗಿದೆ.

ಗಣಿಗಾರಿಕೆಯಿಂದ ಆಸುಪಾಸಿನ ಹತ್ತಾರು ಹಳ್ಳಿಗಳ ಅಂತರ್ಜಲದ ಮೂಲವಾಗಿರುವ ಜಮ್ಮಾಪುರ ಗುಡ್ಡದಲ್ಲಿ ಅಂತರ್ಜಲದ ಮೂಲಗಳು ಬತ್ತುವ ಅಪಾಯವಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಜಮ್ಮಾಪುರ ಗುಡ್ಡದಲ್ಲಿ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರು ಲಭ್ಯತೆ ಇದೆ . ಈ ಪ್ರದೇಶ ಅರಣ್ಯ ಇಲಾಖೆ ವ್ಯಾಪ್ತಿಗೆ ಸೇರಿದ್ದು, ಇಲ್ಲಿ ಈಚೆಗೆ ಅಕ್ರಮವಾಗಿ ಗಣಿಗಾರಿಕೆ ನಡೆದಿದೆ. ಗಣಿಗಾರಿಕೆಗೆ ಇಲಾಖೆಗಳಿಂದ ಪರವಾನಗಿ ಪಡೆದಿರುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕಾಗಿದೆ.

ಕುರುಚಲು ಪರವಾನಗಿ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ದೂರು ಸಲ್ಲಿಸಿದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಅಕ್ರಮ ಗಣಿಗಾರಿಕೆ ತಡೆಯದೇ ಇದ್ದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಜಮ್ಮಾಪುರ ಗ್ರಾಮದ ಯುವ ಮುಖಂಡ ಬಾಲರಾಜ್ ಎಚ್ಚರಿಸಿದ್ದಾರೆ.

ಅರಣ್ಯದಲ್ಲಿ ನೆಲೆ ಕಂಡುಕೊಂಡ ವನ್ಯಪ್ರಾಣಿಗಳ ಆವಾಸ ಸ್ಥಾನಕ್ಕೆ ಧಕ್ಕೆಯಾಗಿದೆ. 1,500 ಎಕರೆಗೂ ಹೆಚ್ಚು ವಿಸ್ತೀರ್ಣದ ಗುಡ್ಡದ ಪ್ರದೇಶದಲ್ಲಿ ಉತ್ಕೃಷ್ಟ ಗುಣಮಟ್ಟದ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ದೂರು ಕೇಳಿ ಬಂದ ಕಾರಣ ತಹಶೀಲ್ದಾರ್ ಸಂತೋಷ್ ಅವರು ಅಕ್ರಮ ಗಣಿಗಾರಿಕೆ ನಡೆದ ಜಮ್ಮಾಪುರ ಗುಡ್ಡಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಅಕ್ರಮ ಗಣಿಗಾರಿಕೆ ಬಗ್ಗೆ ತಾಲ್ಲೂಕು ಆಡಳಿತ ಯಾವ ಕ್ರಮ ಕೈಗೊಳ್ಳುತ್ತದೆ ಎಂದು ಕಾದುನೋಡಬೇಕಿದೆ.

# ದಾರ್ಶನಿಕರ ಜಯಂತಿ ಆಚರಣೆಗೆ ಸೀಮಿತ

## ಹರಿಹರ ತಾ. ಆಡಳಿತದ ಬಸವ ಜಯಂತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ರಾಮಚಂದ್ರಪ್ಪ



ಹರಿಹರ, ಮೇ 4 - ನಾಡಿನಾದ್ಯಂತ ಆಚರಣೆ ಮಾಡುತ್ತಿರುವ ದಾರ್ಶನಿಕರ ಜಯಂತಿಗಳು ಕೇವಲ ಸಾಂಪ್ರದಾಯಿಕ ಆಚರಣೆಗೆ ಮಾತ್ರ ಸೀಮಿತವಾಗಿವೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಗುರುಭವನದಲ್ಲಿ ತಾಲ್ಲೂಕು ಆಡಳಿತ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದ ನಡೆದ ಬಸವೇಶ್ವರ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಡಿನಾದ್ಯಂತ ಅನೇಕ ಮಹಾತ್ಮರ ಮತ್ತು ದಾರ್ಶನಿಕರ ಜಯಂತಿ ಆಚರಣೆ ಮಾಡುವುದರಿಂದ ಸಮಾಜದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಬಹುದು ಎಂದು ನಿರೀಕ್ಷೆಗಿಂತ ಹೆಚ್ಚು ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಗಿವೆ. ತಿಂಗಳಲ್ಲಿ ನಾಲ್ಕು ಜನರ ದಾರ್ಶನಿಕರ ಜಯಂತಿ ಆಚರಣೆ ಮಾಡುವುದರಿಂದ ಜಯಂತಿ ಆಚರಣೆ ಬಗ್ಗೆ ಹೆಚ್ಚು ತಾತ್ಸಾರ ಮನೋಭಾವ ಹೆಚ್ಚಾಗಿದೆ ಎಂದು ಹೇಳಿದರು.

ಬಸವಣ್ಣನವರು ಕಲ್ಯಾಣದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ತಮ್ಮದೇ ಆದ ರೀತಿಯಲ್ಲಿ ಕ್ರಾಂತಿಯನ್ನು ಮಾಡಿ ವಿಶ್ವಗುರು ಪ್ರಖ್ಯಾತಿಯನ್ನು ಹೊಂದಿದ್ದರು. 12 ನೇ ಶತಮಾನದಲ್ಲಿ ಬಿಜ್ಜಳ ರಾಜನ ಮಂತ್ರಿಯಾಗಿ ಆಡಳಿತದಲ್ಲಿ ಸಾಕಷ್ಟು ಬದಲಾವಣೆ ತಂದಿದ್ದು ಈಗಿನ ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಅಡಿಗಲ್ಲು ಆಗಿದೆ ಎಂದರು.

ಅನುಭವ ಮಂಟಪದಲ್ಲಿ ಎಲ್ಲಾ ವರ್ಗದ ಜನತೆಗೆ ಸರಿಯಾದ ರೀತಿಯಲ್ಲಿ ಸ್ಥಾನಗಳನ್ನು ನೀಡಿ ಸಮಾನತೆ ತೋರಿಸಿದ್ದರು. ಸಮಾಜ, ಸರ್ಕಾರ ಮತ್ತು ಮೌಲ್ಯದ ಬಗ್ಗೆ ಸಂವಿಧಾನದ ಅಂಶಗಳು ಹೇಗೆ ಅದಕ್ಕಾಗಿ ನಾನು ಹೇಗೆ ನಡೆದುಕೊಂಡು ಹೋಗಬೇಕು ಎಂಬುದನ್ನು 12 ನೇ ಶತಮಾನದಲ್ಲಿ ಜಗತ್ತಿಗೆ ಸಾರಿದ ಮಹಾನ್ ವ್ಯಕ್ತಿ ಎಂದವರು ಹೇಳಿದರು.

ಉಪನ್ಯಾಸಕ ದಾವಣಗೆರೆ ನಾಗರಾಜ್ ಮಾತನಾಡಿ, 12 ನೇ ಶತಮಾನದಲ್ಲಿ ಭಕ್ತಿಗೆ ಭಂಡಾರವಾಗಿ, ಕಾಯಕಕ್ಕೆ ದಣಿಯಾಗಿ, ದಲಿತರ ಧ್ವನಿಯಾಗಿ ಮಹಿಳೆಯರ ಮನ್ನಣೆಯಾಗಿ, ಸಾಹಿತ್ಯಕ್ಕೆ ಸಿರಿಯಾಗಿ ಅನೇಕ ಅನಿಷ್ಟ ವಿಚಾರಗಳನ್ನು ತೊಲಗಿಸಿದ ವಿಶ್ವದ ಮಹಾನ್ ಚೇತನ ಬಸವಣ್ಣನವರು ಎಂದು ಹೇಳಿದರು.

ಈ ವೇಳೆ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜೆ. ಶಿವಾನಂದಪ್ಪ, ಉಪಾಧ್ಯಕ್ಷ ಟಿ.ಜೆ. ಮುರುಗೇಶಪ್ಪ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಬಿಇಓ ಬಿ.ಸಿ. ಸಿದ್ದಪ್ಪ, ಸಿಪಿಐ ಸತೀಶ್ ಕುಮಾರ್, ಪೌರಾಯುಕ್ತ ಐ. ಬಸವರಾಜ್, ನಗರಸಭೆ ಸದಸ್ಯೆ ಉಷಾ ಮಂಜುನಾಥ್, ಅಖಿಲ ಭಾರತ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ಜಿ.ಎಂ. ರೂಪಾ, ಜಿ.ಕೆ. ಮಲ್ಲಿಕಾರ್ಜುನ, ಕೊಟ್ರೇಶ್ ಭಾನುವಳ್ಳಿ, ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಪ್ರಕಾಶ್ ಕೋಳೂರು, ರುದ್ರೇಗೌಡ, ಜಿ.ಕೆ. ವೀರಣ್ಣ, ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂತೇಶ್, ತೋಟಗಾರಿಕೆ ಇಲಾಖೆಯ ಕವಿತ, ಸಿಡಿಪಿಓ ನಿರ್ಮಲ, ಲೋಕೋಪಯೋಗಿ ಶಿವಮೂರ್ತಿ, ಈಶಪ್ಪ ಬೂದಿಹಾಳ, ಹರೀಶ್ ಬನ್ನಿಕೋಡು, ಲೋಕೇಶ್ ಬನ್ನಿಕೋಡು, ಉಮೇಶ್ ಗಂಗನಹರಸಿ, ಎಂ. ಚಿದಾನಂದ ಕಂಚಿಕೇರಿ, ಹೆಚ್.ಸಿ. ಕೀರ್ತಿಕುಮಾರ್, ಶೇಖರಗೌಡ, ಮಂಜುನಾಥ್ ಪೂಜಾರ್, ನಾಗರಾಜ್, ಎನ್.ಇ. ಸುರೇಶ್, ಉಮ್ಮಣ್ಣ ಎಂ.ಇ. ಹೊರಕೇರಿ, ಅಂಗಡಿ ಮಂಜುನಾಥ್, ಅಂಜು ರಾಜನ್ನವರ್ ಮತ್ತಿತರರು ಉಪಸ್ಥಿತರಿದ್ದರು.

# ರೈತರಿಂದಲೇ ರಾಗಿ ಖರೀದಿಸುವಂತೆ ಸೂಚನೆ



**(1ನೇ ಪುಟದಿಂದ)** ಮುಂದಿನ ದಿನಗಳಲ್ಲಿ ಹೆಚ್ಚು ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕೋವಿಡ್ ಮರಣ ಪರಿಹಾರ ಪ್ರಕರಣಗಳಲ್ಲಿ ನಿಯಮದಂತೆ ಪರಿಹಾರವನ್ನು ನೀಡಲಾಗುತ್ತಿದೆ. ಮಳೆ ಹಾನಿಗೆ ಸಂಬಂಧಿಸಿದಂತೆ ಜಗಳೂರಿನಲ್ಲಿ ಓರ್ವ ವ್ಯಕ್ತಿ ಸಾವನ್ನಪ್ಪಿದ್ದು, ಚನ್ನಗಿರಿ ತಾಲ್ಲೂಕಿನಲ್ಲಿ 35 ಕುರಿಗಳು ಸಾವನ್ನಪ್ಪಿವೆ. ಈ ಸಂಬಂಧ ಪರಿಹಾರ ನೀಡಲಾಗುತ್ತಿದೆ ಹಾಗೂ 35 ವಾರಗಳಿಗಾಗುವಷ್ಟು ಮೇವು ಲಭ್ಯವಿದ್ದು, ಯಾವುದೇ ಮೇವಿನ ಸಮಸ್ಯೆ ಇಲ್ಲ ಎಂದರು.

ಸಭೆಗೆ ಮಾಹಿತಿ ನೀಡಿದ ಆಹಾರ ಇಲಾಖೆಯ ಜಂಟಿ ಕಾರ್ಯದರ್ಶಿ ಮಂಟೇಸ್ವಾಮಿ, ಜಿಲ್ಲೆಯಲ್ಲಿ ಈಗಾಗಲೇ 2862 ರೈತರ 52591 ಕ್ವಿಂಟಾಲ್ ರಾಗಿಗೆ ನೋಂದಣಿಯಾಗಿದೆ ಹಾಗೂ 12900 ಪಡಿತರ ಚೀಟಿಗೆ ಅರ್ಜಿಗಳು ಬಂದಿದ್ದು, 4000 ಕಾರ್ಡುಗಳನ್ನು ವಿತರಿಸಲಾಗಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಕೋವಿಡ್ ಶೂನ್ಯ ಪ್ರಕರಣಗಳಿದ್ದು ದಿನ ನಿತ್ಯ 60-70 ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಲಕ್ಷಣಗಳಿರುವ ಪ್ರತಿಯೊಬ್ಬರಲ್ಲೂ ಐಎಲ್ಐ ಹಾಗೂ ಸಾರಿ ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಒಟ್ಟಾರೆ ಮೂರನೇ ಅಲೆಯಲ್ಲಿ 1.70 ಲಕ್ಷ ಪರೀಕ್ಷೆಗಳನ್ನು ಮಾಡಲಾಗಿದ್ದು, ಅವುಗಳಲ್ಲಿ 6344 ಪಾಸಿಟಿವ್ ಪ್ರಕರಣಗಳು ಕಂಡು ಬಂದಿದ್ದು, 15 ಮರಣ ಸಂಭವಿಸಿರುತ್ತವೆ ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನಜ್ಮಾ ಮಾಹಿತಿ ನೀಡಿ, ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ 14 ನೇ ಹಣಕಾಸು ಯೋಜನೆಯಲ್ಲಿ ಶೇ.95.27 ರಷ್ಟು ಸಾಧನೆಯಾಗಿದ್ದು, 15ನೇ ಹಣಕಾಸು ಯೋಜನೆಯಲ್ಲಿ ಶೇ.60.57 ರಷ್ಟು ಪ್ರಗತಿಯಾಗಿದೆ ಎಂದರು.

ಸಭೆಯಲ್ಲಿ ಜಿ.ಪಂ ಸಿಇಓ ಡಾ.ಎ.ಚನ್ನಪ್ಪ, ಅಪರ ಜಿಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಉಪವಿಭಾಗಾಧಿಕಾರಿಗಳಾದ ಮಮತ ಹೊಸಗೌಡರ್ ಹಾಗೂ ತಿಮ್ಮಣ್ಣ, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ, ಸ್ಮಾರ್ಟ್ ಸಿಟಿಯ ರವೀಂದ್ರ ಮಲ್ಲಾಪುರ, ಡಿಹೆಚ್‌ಓ ನಾಗರಾಜ್, ಡಾ.ಮುರಳೀಧರ್, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ಕರುಣಾ ಟ್ರಸ್ಟ್‌ನ ಮಜ್ಜಿಗೆ ವಿತರಣೆ ಮುಕ್ತಾಯ

ದಾವಣಗೆರೆ, ಮೇ 4 - ಕಳೆದ ಮಾರ್ಚ್ 25 ರಿಂದ ಏಪ್ರಿಲ್ 30ರವರೆಗೆ ಸತತವಾಗಿ ಐದನೇ ವರ್ಷದ ಉಚಿತ ಮಜ್ಜಿಗೆ ಮತ್ತು ನೀರಿನ ವಿತರಣಾ ಕಾರ್ಯಕ್ರಮವನ್ನು ಕರುಣಾ ಜೀವ ಕಲ್ಯಾಣ ಟ್ರಸ್ಟಿನಿಂದ ಮಾಡಲಾಯಿತು.

ನಗರದ ಜಯದೇವ ಸರ್ಕಲ್, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಕೆ.ಆರ್.ಮಾರ್ಕೆಟ್ ಮತ್ತು ಹಳೆ ಹೆರಿಗೆ ಆಸ್ಪತ್ರೆ ಹತ್ತಿರ ಪ್ರತಿನಿತ್ಯ ಸಾರ್ವಜನಿಕರು, ಬಡವರು ಇದರ ಸದುಪಯೋಗ ಪಡೆದುಕೊಂಡರು. ಈ ಸತ್ಕಾರ್ಯಕ್ಕೆ ಧನಸಹಾಯ ನೀಡಿದಂತಹ ಎಲ್ಲಾ ಸಹೃದಯಿ ದಾನಿಗಳಿಗೆ ಕರುಣಾ ಟ್ರಸ್ಟಿನ ಕಾರ್ಯ ದರ್ಶಿ ಶಿವನಕೆರೆ ಬಸವಲಿಂಗಪ್ಪ ಕೃತಜ್ಞತೆ ಸಲ್ಲಿಸಿದ್ದಾರೆ.

# ಬಸವಣ್ಣನವರ ಚಿಂತನೆಗಳು ಸಾರ್ವಕಾಲಿಕ ಪ್ರಸ್ತುತ

**(1ನೇ ಪುಟದಿಂದ)** ವಚನ ಸಾಹಿತ್ಯವನ್ನು ಜಗತ್ತಿನೆಲ್ಲೆಡೆ ಪ್ರಸಾರ ಮಾಡಬೇಕೆಂಬ ಹಂಬಲವುಳ್ಳವರಾಗಿದ್ದರು. ಪೂಜ್ಯರ ಹಂಬಲ ಇಂದು ಈಡೇರುತ್ತಿರುವುದು ಸಂತೋಷ ತಂದಿದೆ. ಬಸವಣ್ಣನವರ ವಚನಗಳ ತೆಲುಗು ಅನುವಾದಿತ ಕೃತಿ ಇಂದು ಬೆಳಕು ಕಾಣುತ್ತಿರುವ ದಿನದಂದೇ ಆಂಧ್ರ ಪ್ರದೇಶ ಸರ್ಕಾರ ನಾಡಿನಾದ್ಯಂತ ಬಸವ ಜಯಂತಿ ಆಚರಣೆಗೆ ಕರೆಕೊಟ್ಟಿರುವುದು ಔಚಿತ್ಯ ಪೂರ್ಣವಾಗಿದೆ ಎಂದರು.

ಮೈಸೂರಿನ ಪ್ರೊ. ಚಂದ್ರಶೇಖರಯ್ಯ ರಚಿಸಿರುವ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಜೀವನವನ್ನಾಧರಿಸಿದ 'ಧೀರ ಸನ್ಯಾಸಿ' ಕೃತಿ ಲೋಕಾರ್ಪಣೆ ಮಾಡಿದ ವಿಶ್ರಾಂತ ನ್ಯಾಯಮೂರ್ತಿ ಜಸ್ಟೀಸ್ ಶಿವರಾಜ್ ಪಾಟೀಲ್ ಮಾತನಾಡಿ, ರೋಗಗ್ರಸ್ಥ ಸಮಾಜಕ್ಕೆ ವಚನಗಳು ಸಂಜೀವಿನಿಯಿದ್ದಂತೆ, ಇಂದಿನ ಯುವ ಜನತೆ ವಚನ ಸಾಹಿತ್ಯವನ್ನು ಓದುವಂತಾಗಬೇಕು. ಪೂಜ್ಯರು ರೂಪಿಸಿರುವ ವಚನ ತಂತ್ರಾಂಶದಿಂದ ಕೈಗೆಟುಕುವಂತೆ ಎಲ್ಲಾ ವರ್ಗದವರಿಗೆ ವಚನ ಸಾಹಿತ್ಯ ದೊರಕುವಂತಾಗಿದೆ ಎಂದರು.

ವಚನ ಸಾಹಿತ್ಯ ಸಂಶೋಧಕ ಡಾ. ವೀರಣ್ಣ ರಾಜೂರ ಮಾತನಾಡಿ, ವಚನ ಸಾಹಿತ್ಯದ ನಿಧಿಯನ್ನು ಫ.ಗು. ಹಳಕಟ್ಟಿಯವರು ಮೊದಲು ಶೋಧಿಸಿ ಪ್ರಕಟಿಸಿದರು. ಅದನ್ನು ಭಿನ್ನ ಭಿನ್ನ ಮಾಧ್ಯಮದ ಮೂಲಕ ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಪ್ರಸಾರ ಮಾಡಿದ ಕೀರ್ತಿ ಸಿರಿಗೆರೆ ಮಠದ್ದು. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ವಚನ ಸಾಹಿತ್ಯವು ಅನ್ಯ ಭಾಷಿಗರಿಗೂ ದೊರಕುವಂತಾಗಲು ಇಂಗ್ಲಿಷ್, ಹಿಂದಿ, ತೆಲುಗು, ಉರ್ದು ಮುಂತಾದ ಭಾಷೆಗಳಿಗೆ ಅನುವಾದ ಮಾಡಿಸಿ, ಪ್ರಕಟಿಸಿದರು. ಪ್ರಸ್ತುತ ಜಗದ್ಗುರುಗಳು ಆಧುನಿಕ ತಂತ್ರಜ್ಞಾನವನ್ನು ಬಳಸಿ 22 ಸಾವಿರ ವಚನಗಳನ್ನು ಜಾಲತಾಣದ ಮೂಲಕ ಜಗತ್ತಿನಾದ್ಯಂತ ಬೆರಳ ತುದಿಯಲ್ಲಿ ದೊರಕುವಂತೆ ಮಾಡಿದ್ದಾರೆ ಎಂದರು.

ವಚನ ಸಾಹಿತ್ಯ ಸರ್ವೋದಯದ ತೀರ್ಥವಿದ್ದಂತೆ. ಜಾತಿ, ಮತ, ವರ್ಗಗಳ ಭೇದವಿಲ್ಲದೆ ಎಲ್ಲರೂ ಸಮಾನರು ಎಂಬ ತತ್ವನ್ನು ಶರಣರು ಸಾರಿದರು. ಜನಭಾಷೆಯ ಮೂಲಕ ತತ್ವವನ್ನು ಸರಳವಾಗಿ ಹೇಳಿದ ಬಸವಾದಿ ಶರಣರು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದರು ಎಂದು ಬಹುಭಾಷಾ ವಿದ್ವಾಂಸ ಡಾ. ಹಂಪನಾ ನುಡಿದರು.

ವಿಪ್ರೊ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಪಿ. ಸುಬ್ರಹ್ಮಣ್ಯಂ ಅವರು ಪೂಜ್ಯರು ರೂಪಿಸಿರುವ ಶಿವಶರಣ ವಚನ ಸಂಪುಟ ಜಾಲತಾಣವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಹೈದರಾಬಾದ್ ಹೈಕೋರ್ಟಿನ ನ್ಯಾಯವಾದಿ ವಿಜಯಕುಮಾರ ಹೇರೂರು, ಲೇಖಕ ಚಂದ್ರಶೇಖರಯ್ಯ, ಶಾಸಕ ವೈ.ಎ ನಾರಾಯಣ ಸ್ವಾಮಿ, ಸುರೇಶ್ ಮುಂತಾದವರು ಮಾತನಾಡಿದರು.

ಕು. ಪೃಥ್ವಿ ಬೇಲೂರು, ಐಶ್ವರ್ಯ ಮತ್ತು ಚನ್ನೈನ ಚಿತ್ರ ಚಂದ್ರಶೇಖರ್ ವಚನ ನೃತ್ಯ ಅಭಿನಯಿಸಿದರು. ತರಳಬಾಳು ಕೇಂದ್ರದ ಕಾರ್ಯದರ್ಶಿ ಬಾತಿ ವಿಶ್ವನಾಥ್ ಸ್ವಾಗತಿಸಿದರು. ಕೇಂದ್ರದ ಅಧ್ಯಕ್ಷ ಚಂದ್ರಪ್ಪ ವಂದಿಸಿದರು.

# ಇಸ್ರೋದಿಂದ ಶುಕ್ರ ಗ್ರಹ ಯಾನಕ್ಕೆ ನಿರ್ಧಾರ

ನವದೆಹಲಿ, ಮೇ 4 – ಚಂದ್ರಯಾನ ಹಾಗೂ ಮಂಗಳಯಾನದ ನಂತರ ಇಸ್ರೋ ಈಗ ಶುಕ್ರ ಗ್ರಹ ಯಾನ ಕೈಗೊಳ್ಳಲಿದೆ. ಈ ಗ್ರಹದ ನಿಗೂಢತೆ ಅರಿಯಲು ಯಾನ ನೆರವಾಗಲಿದೆ

ಶುಕ್ರ ಗ್ರಹ ಯೋಜನೆ ಕುರಿತ ವರದಿಯನ್ನು ಪರಿಗಣಿಸಲಾಗಿದೆ. ಇದಕ್ಕೆ ಅಗತ್ಯವಾದ ಹಣವನ್ನು ಗುರುತಿಸಲಾಗಿದೆ ಎಂದು ಇಸ್ರೋ ಅಧ್ಯಕ್ಷ ಸೋಮನಾಥ್ ಹೇಳಿದ್ದಾರೆ.

ಭಾರತ ಈಗ ಹೊಂದಿರುವ ಸಾಮರ್ಥ್ಯದಿಂದ ಅತ್ಯಲ್ಪ ಅವಧಿಯಲ್ಲೇ ಶುಕ್ರಯಾನ ಸಾಧ್ಯವಾಗಲಿದೆ ಎಂದು ಸೋಮನಾಥ್ ತಿಳಿಸಿದ್ದಾರೆ. ಡಿಸೆಂಬರ್ 2024ರ ವೇಳೆಗೆ ಶುಕ್ರಯಾನದ ರಾಕೆಟ್ ಉಡಾವಣೆಗೆ ಯೋಜಿಸಿದೆ. ಈ ಅವಧಿಯಲ್ಲಿ ಅತ್ಯಂತ ಕಡಿಮೆ ಇಂಧನದಲ್ಲಿ ಉಪಗ್ರಹವನ್ನು ಶುಕ್ರ ಗ್ರಹದ ಕಕ್ಷೆಗೆ ರವಾನಿಸ ಬಹುದು. ಈ ವರ್ಷ ಬಿಟ್ಟರೆ, 2031 ರಲ್ಲಿ ಮಾತ್ರ ಇಂತಹ ಅವಕಾಶ ಸಿಗಲಿದೆ.

# ಸಾಮರಸ್ಯದಿಂದ ಬದುಕೋಣ : ಶಾಸಕ ಎಸ್.ವಿ. ರಾಮಚಂದ್ರ ಕರೆ



ಜಗಳೂರು, ಮೇ 4- ಹಿಂದೂ ಮತ್ತು ಮುಸಲ್ಮಾನರು ಸಾಮರಸ್ಯದಿಂದ ಬದುಕಿದರೆ ಮಾತ್ರ ಸಮಾಜ ಸುಸ್ಥಿರವಾಗಿ ಇರಲು ಬದುಕೋಣ ಎಂದು ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಹಿನ್ನೆಲೆ ಮುಸ್ಲಿಂ ಸಮಾಜದವರ ಪ್ರಾರ್ಥನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಯಾವುದೇ ಅಶಾಂತಿ, ಗದ್ದಲವಿಲ್ಲದಂತೆ ಎಲ್ಲರೂ ಅಣ್ಣ- ತಮ್ಮಂದಿರಂತೆ ಬದುಕುತ್ತಿದ್ದೇವೆ. ಸದಾಕಾಲವೂ ಹೀಗೇ ಇರೋಣ. ತಪ್ಪು ಮಾಡಿದರೆ ತಿದ್ದಿ ಬುದ್ದಿ ಹೇಳಿ. ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹ ನೀಡಿ ಎಂದು ಮನವಿ ಮಾಡಿದರು.

ಮುಸಲ್ಮಾನ್ ಬಾಂಧವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಬೇಕು. ಸೈಕಲ್ ಶಾಪ್, ಕಬ್ಬಿಣದ ಅಂಗಡಿಗಳಲ್ಲಿ ಬಾಲ ಕಾರ್ಮಿಕರಾಗಿ ದುಡಿಯಲು ಬಿಡದೇ ಅಕ್ಷರ ಕಲಿಸಿದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯಾಗಲು ಅನುಕೂಲವಾಗುತ್ತದೆ ಎಂದರು.

ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಮಾತನಾಡಿ, ಖುರ್‌ಆನ್‌ನಲ್ಲಿ ಮಾನವ ಕುಲಕ್ಕೆ ಅಲ್ಲಾಹುವಿನ ಸಂದೇಶವಿದೆ. ದೇವನೊಬ್ಬ ನಾಮ ಹಲವು ಎಂದು ಹೇಳಲಾಗಿದೆ. ಎಲ್ಲರೂ ಅಣ್ಣ ತಮ್ಮಂದಿರಂತೆ ಇರೋಣ ಎಂದರು.

ಜೆಡಿಎಸ್ ಮುಖಂಡ ಕೆ.ಬಿ. ಕಲ್ಲೇರುದ್ರೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಹಿಂದೂ, ಮುಸ್ಲಿಮರು ಅಣ್ಣ-ತಮ್ಮಂದಿರಂತೆ ಇದ್ದೇವೆ. ಈ ಸಾಮರಸ್ಯದ ವಾತಾವರಣ ರಾಜ್ಯಾದ್ಯಂತ ಹರಡಲಿ ಎಂದರು.

ಕಾಂಗ್ರೆಸ್ ಮುಖಂಡ ಕೆ.ಪಿ.ಪಾಲಯ್ಯ, ಜಾಮೀಯ ಮಸ್ಜಿದ್ ಅಧ್ಯಕ್ಷ ಅತ್ತರ್‌ವುಲ್ಲಾ ಖಾನ್, ಮುಖಂಡರಾದ ಮೊಹಮದ್ ಅನ್ವರ್, ಇಕ್ಬಾಲ್ ಅಹಮದ್ ಖಾನ್, ಇಮಾಮ್ ಅಲಿ, ಶಂಷೀರ್ ಅಹಮದ್, ಪಟ್ಟಣ ಪಂಚಾಯಿತಿ ಅಧ್ಯಕ್ಷ ಸಿದ್ದಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


## 17ನೇ ವರ್ಷದ ಪುಣ್ಯಸ್ಮರಣೆ



**ಜಿ.ಸಿ. ರುದ್ರಮುನಿ, ASI**

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಪತ್ನಿ : **ಶ್ರೀಮತಿ ಗೌರಮ್ಮ ಜಿ.ಎಂ.**

ಮಗಳು : **ಶ್ರೀಮತಿ ಆರ್. ಲತಾ ಮಂಜಣ್ಣ ಎಸ್.ಬಿ.,**

ಮಗ : **ಆರ್. ವೀರೇಂದ್ರ, ಶ್ರೀಮೈತ್ರಿ,**

ಮೊಮ್ಮಕ್ಕಳು : **ಓಂಪ್ರಕಾಶ್, ಶಿವಾನಿ ಹಾಗೂ ಬಂಧು-ಮಿತ್ರರು.**



## ಎಸ್. ಸರ್ವಮಂಗಳಮ್ಮ ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್ ಶಂಕರಲೀಲಾ ಗ್ಯಾಸ್ ಏಜೆನ್ಸಿ ಹಿಂಭಾಗದ ವಾಸಿ **ಕಂಚುಗಾರನಹಳ್ಳಿ ಮಠದ ಲಿಂ|| ಸೋಮಶೇಖರಯ್ಯ** ಇವರ ಧರ್ಮಪತ್ನಿ

**ಎಸ್. ಸರ್ವಮಂಗಳಮ್ಮ**

ಇವರು ದಿನಾಂಕ 4.5.2022ರ ಬುಧವಾರ ರಾತ್ರಿ 7.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.5.2022ರ ಗುರುವಾರ ಮಧ್ಯಾಹ್ನ 1.15ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

**ಕಂಚುಗಾರನಹಳ್ಳಿ ಮಠದ ವಂಶಸ್ಥರು**


**ಮೊ: 94811 60818, 94493 74207**


# ಹಳೇದೇವರ ಹೊನ್ನಾಳಿ ರಾಮಾನುಜಾಚಾರ್ಯರ ಜಯಂತಿ ಇಂದು

ಹೊನ್ನಾಳಿ ತಾಲ್ಲೂಕಿನ ಹಳೇ ದೇವರ ಹೊನ್ನಾಳಿಯಲ್ಲಿ ಶ್ರೀ ಭಗವಾನ್ ರಾಮಾನುಜಾಚಾರ್ಯರ 1005ನೇ ಜಯಂತಿ ಇಂದು ನಡೆಯಲಿದೆ ಎಂದು ಶ್ರೀ ರಾಮಾನುಜಾಚಾರ್ಯರ ಮಠದ ವ್ಯವಸ್ಥಾಪಕ ಎಸ್.ಕೆ. ಗೋಪಾಲಯ್ಯ ತಿಳಿಸಿದ್ದಾರೆ.

ಶ್ರೀ ರಾಮಾನುಜಾಚಾರ್ಯರ ಮಠದಲ್ಲಿ 6ನೇ ವರ್ಷದ ಆಚರಣೆ, ಶ್ರೀ ಭಗವಾನ್ ರಾಮಾನುಜಾಚಾರ್ಯರ ನೂತನ ರಥೋತ್ಸವ ಕೂಡ ನಡೆಯಲಿದೆ.


## ಹಳ್ಳಿಹಾಳ್ ಗ್ರಾಮದ ಮುರುಡಪ್ಪ ನಿಧನ



ಹರಿಹರ ತಾಲ್ಲೂಕು ಹಳ್ಳಿಹಾಳ್ ಗ್ರಾಮದ ತಳವಾರ್ ಮುರುಡಪ್ಪ (79 ವರ್ಷ) ಅವರು ದಿನಾಂಕ 04-05-2022 ರ ಬುಧವಾರ ಬೆಳಗ್ಗೆ 11 ಗಂಟೆಗೆ ನಿಧನರಾದರು, ಪತ್ನಿ, ಐವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂ ದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05-05-2022 ರ ಗುರುವಾರ ಬೆಳಗ್ಗೆ 11 ಗಂಟೆಗೆ ಹಳ್ಳಿಹಾಳ್ ಗ್ರಾಮದಲ್ಲಿ ನೆರವೇರಲಿದೆ.


# ಬಸವಾದಿ ಶಿವಶರಣರ ಅಧ್ಯಯನ ಅಗತ್ಯ

**(1ನೇ ಪುಟದಿಂದ)** ವ್ಯವಸ್ಥೆ ಆರಂಭವಾಗಿದ್ದು ಕರ್ನಾಟಕದ ಬಸವ ಕಲ್ಯಾಣದಲ್ಲಿ. ಸಂಸತ್ತಿನ ಮತ್ತು ಸಂವಿಧಾನದ ಮಾತೃ ಬಸವಾದಿ ಶಿವಶರಣರ 'ಅನುಭವ ಮಂಟಪ' ಎಂದು ಶರಣರು ತಿಳಿಸಿದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹಾಗೂ ಬಸವ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ. ಜೆ. ಅಜಯ ಕುಮಾರ್ ನೇತೃತ್ವದಲ್ಲಿ ಬಸವ ಜಯಂತಿಯ ಬೃಹತ್ ಮೆರವಣಿಗೆ ಅದ್ವಿತೀಯವಾಗಿ ನಡೆದಿದೆ ಎಂದು ಹೇಳಲು ಅತೀವ ಸಂತೋಷವಾಗುತ್ತಿದೆ ಎಂದರು.

ಸಮ್ಮುಖ ವಹಿಸಿದ್ದ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಮಾತನಾಡಿ, ಹನ್ನೆರಡನೇ ಶತಮಾನದಲ್ಲಿನ ಭಕ್ತಿ ಭಂಡಾರಿ ಬಸವಣ್ಣನವರ ಪರಿಕಲ್ಪನೆ, ಕನಕದಾಸರ ಆಲೋಚನೆಯನ್ನು ಡಾ. ಮುರುಘಾ ಶರಣರು ಸಾಕಾರಗೊಳಿಸಿದ್ದಾರೆ ಎಂದು ಹೇಳಿದರು.

ಬಸವ ತತ್ವ ಮತ್ತು ಆದರ್ಶಗಳನ್ನು ಅಳವಡಿಸಿಕೊಳ್ಳುವ ಜೊತೆಗೆ ಆಚರಣೆಗೆ ತರುವಂತೆ ಕರೆ ನೀಡಿದರು.

ಹೊಸದುರ್ಗ ಮಧುರೆಯ ಶ್ರೀ ಭಗೀರಥಗುರುಪೀಠದಶ್ರೀಪುರುಷೋತ್ತಮಾನಂದ ಸ್ವಾಮೀಜಿ ಮಾತನಾಡಿ, ಹನ್ನೆರಡನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ನಂತರ, ಅನುಭವ ಮಂಟಪದಲ್ಲಿ ಸರ್ವ ಸಮುದಾಯಗಳ ಕಲ್ಯಾಣಕ್ಕಾಗಿ, ಸಮಾಜದ ಒಳಿತಿಗಾಗಿ, ಸಮಾಜಮುಖಿ ಚಿಂತನೆಗಳನ್ನು ಮಾಡುವ ಮೂಲಕ ಜಾರಿಗೆ ತರಲು ಅವಿರತ ಪ್ರಾಮಾಣಿಕ ಪ್ರಯತ್ನವನ್ನು ಬಸವಾದಿ ಶಿವಶರಣರು ಮಾಡಿದ್ದಾರೆ ಎಂದರು.

ಅದರಂತೆ ಚಿತ್ರದುರ್ಗ ಶಿವಮೂರ್ತಿ ಮುರುಘಾ ಶರಣರು ಕೂಡ ಸರ್ವ ಸಮುದಾಯ ಗಳ ಗುರು ಪೀಠಗಳನ್ನು ಸ್ಥಾಪಿಸಿ, ಗುರುಗಳನ್ನು ನೇಮಿಸಿ ಎಲ್ಲಾ ವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವನ್ನು ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಸರ್ಕಾರ ಮಾಡಬೇಕಾದ ಸಮಾಜ ಸೇವಾ ಕಾರ್ಯಗಳನ್ನು ನಾಡಿನ ಮಠ ಮಾನ್ಯಗಳು ಮಾಡುತ್ತಿವೆ. ಅನ್ನ ದಾಸೋಹ, ಅಕ್ಷರ ದಾಸೋಹದ ಪರಿಕಲ್ಪನೆ ಬಂದದ್ದು ಮೊದಲು ಕರ್ನಾಟಕದಲ್ಲಿ ಎಂದು ತಿಳಿಸಿದರು.

ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಮಾತನಾಡಿ, ಬಸವ ತತ್ವ, ವಚನಗಳನ್ನಾಧರಿಸಿಯೇ ಭಾರತದ ಸಂವಿಧಾನ ರಚನೆಯಾಗಿರುವುದು. ಸಂಸತ್ ಕೂಡ ಅನುಭವ ಮಂಟಪದ ಮಾದರಿಯಲ್ಲಿ ಸ್ಥಾಪನೆಯಾಗಿದೆ ಎಂದರು.

ಮುರುಘಾ ಮಠ ಸಹ ಅನ್ನ ದಾಸೋಹ ಮತ್ತು ಅಕ್ಷರ ದಾಸೋಹವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಪ್ರತಿ ತಿಂಗಳು ಉಚಿತ ಸಾಮೂಹಿಕ ವಿವಾಹ, ಅನಾಥರಿಗೆ, ವೃದ್ದರಿಗೆ ಆಶ್ರಯ ಕೊಡುವ ಜೊತೆಗೆ ವಿವಿಧ ಹಂತದ ವಿದ್ಯಾಕೇಂದ್ರಗಳನ್ನು ತೆರೆದು ಶಿಕ್ಷಣ ಸೇವೆಯಲ್ಲಿ ತೊಡಗಿರುವುದು ಮೆಚ್ಚುವಂತಹದ್ದು. ಮುರುಘಾ ಶರಣರು ಆಧುನಿಕ ಬಸವಣ್ಣ ಎಂದು ಬಣ್ಣಿಸಿದರು.

ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಮಾತನಾಡಿ, ದಾವಣಗೆರೆಯಲ್ಲಿ ಇಂದು ನಡೆದ ಬಸವ ಜಯಂತಿ ಉತ್ಸವ ಚಿತ್ರದುರ್ಗದ ಶರಣ ಸಂಸ್ಕೃತಿ ಉತ್ಸವವನ್ನು ನೆನಪಿಸುವಂ ತಿದೆ. ಬಸವ ತತ್ವ ಮತ್ತು ಆದರ್ಶಗಳು ಮನೆ ಮನೆಗಳಲ್ಲಿ ಆಚರಿಸುವಂತಾಗಬೇಕು ಎಂದು ಹಿತ ನುಡಿದರು.

ಕಾರ್ಯಕ್ರಮದಲ್ಲಿ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮೇದಾರ ಗುರುಪೀಠದ ಶ್ರೀ ಇಮ್ಮಡಿ ಬಸವ ಮೇದಾರ ಸ್ವಾಮೀಜಿ, ರೈತ ಮುಖಂಡ ತೇಜಸ್ವಿ ಪಟೇಲ್, ದಲಿತ ಮುಖಂಡರಾದ ಬಿ.ಹೆಚ್. ವೀರಭದ್ರಪ್ಪ, ಹೆಚ್. ಕೆ. ಬಸವರಾಜ್, ದುರ್ಗಾಂಬಿಕ ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ, ಬಿಜೆಪಿ ಮುಖಂಡ ನಸೀರ್ ಅಹಮದ್, ಶ್ರೀಮತಿ ಮಂಗಳ ಅಜಯ್ ಕುಮಾರ್ ಉಪಸ್ಥಿತರಿದ್ದರು.

ಬಸವ ಕಲಾ ಲೋಕದ ತೋಟಪ್ಪ ಉತ್ತಂಗಿ ಮತ್ತು ಸಂಗಡಿಗರು ವಚನ ಗಾಯನ ನಡೆಸಿಕೊಟ್ಟರು. ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಭಾ ಪಿ. ದೊಗ್ಗಳ್ಳಿ ನಿರೂಪಿಸಿದರು.

# ಹರಿಹರಕ್ಕೆ ಜಲಧಾರೆ ರಥ



ಹರಿಹರ, ಮೇ 4 - ಜಾತ್ಯತೀತ ಜನತಾದಳದ ವತಿಯಿಂದ ರಾಜ್ಯದ ಸಮಗ್ರ ನೀರಾವರಿಗಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ಜನತಾ ಜಲಧಾರೆ ರಥವು ನಗರಕ್ಕೆ ಆಗಮಿಸಿದ್ದು, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಅವರು ಗುತ್ತೂರು ಬಳಿಯ ಶ್ರೀ ಗಣಪತಿ ದೇವಸ್ಥಾನದ ಮುಂಭಾಗದಲ್ಲಿ ರಥಕ್ಕೆ ಹೂವಿನ ಹಾರವನ್ನು ಹಾಕುವ ಮೂಲಕ ಬರಮಾಡಿಕೊಂಡರು.

ನಂತರ ಜನತಾ ಜಲಧಾರೆ ರಥವು ಹರಪನಹಳ್ಳಿ ರಸ್ತೆ, ಹಳೆ ಪಿ.ಬಿ. ರಸ್ತೆಯಲ್ಲಿ ಬೃಹತ್ ಮೆರವಣಿಗೆಯೊಂದಿಗೆ ಸಂಚಾರ ಮಾಡಿ ತುಂಗಭದ್ರಾ ನದಿ ದಂಡೆಯ ಮೇಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣವನ್ನು ತಲುಪಿತು.

ಜಲ ಶೇಖರಣೆ ಮಾಡಿರುವ ಕುಂಭಕ್ಕೆ ಮಾಜಿ ಶಾಸಕ ಶಿವಶಂಕರ್ ಮತ್ತು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಅವರು ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಗುತ್ತೂರು ಜಂಬಣ್ಣ, ಉಷಾ ಅಂಗಡಿ ಮಂಜುನಾಥ್, ಮುಖಂಡರಾದ ದೀಟೂರು ಶೇಖರಪ್ಪ, ನಂಜಪ್ಪ, ಅಮರಾವತಿ ನಾಗರಾಜ್, ಕೊಂಡಜ್ಜಿ ಮೋಹನ್, ದುಗ್ಗೇಶ್ ದಾವಣಗೆರೆ, ಅಮಾನುಲ್ಲಾ ಖಾನ್, ಯೋಗೀಶ್ ಅಮರಾವತಿ, ಶಂಕ್ರಪ್ಪ ಅಮರಾವತಿ, ಮಾರುತಿ ಬೇಡರ್, ಅಂಡಕಿ ಕುಮಾರ್, ಮಹಾದೇವಪ್ಪ ಮಲೇಬೆನ್ನೂರು, ರಾಗಿಣಿ, ಲತಾ ಕೊಟ್ರೇಶ್, ಮಮತಾ, ರಾಜು, ಪೂಜಾರ್ ವೀರಣ್ಣ, ಸದಾಶಿವ, ಪದ್ಮರಾಜ್, ಕಲ್ಲಪ್ಪ ದೀಟೂರು, ಡಿ.ಸಿ. ವಾಮದೇವ ದೀಟೂರು, ದೀಟೂರು ಹೆಚ್.ಎಸ್. ಮಲ್ಲಿಕಾರ್ಜುನ, ನಿಂಗಾಚಾರಿ, ಎಲ್.ಕೊಟ್ರೇಶ್, ಹೆಚ್.ಎಸ್. ಮಂಜುನಾಥ್, ಹೆಚ್. ಗದ್ದಿಗೆಪ್ಪ, ಜಗದ್ಗೀಶ್, ಮತ್ತಿತರರು ಹಾಜರಿದ್ದರು.

# 2020ರಲ್ಲಿ ದೇಶದಲ್ಲಿ 4.89 ಲಕ್ಷ ಹೆಚ್ಚು ಸಾವು

## ಈ ವರ್ಷದಲ್ಲಿ ಕೊರೊನಾ ಸಾವು 1.49 ಲಕ್ಷ ಎಂದಿದ್ದ ಕೇಂದ್ರ ಸರ್ಕಾರ

ನವದೆಹಲಿ, ಮೇ 4 - ಕೊರೊನಾ ಸಾಂಕ್ರಾಮಿಕ ಹರಡಿದ 2020ರಲ್ಲಿ ದೇಶದಲ್ಲಿ 4.89 ಲಕ್ಷಕ್ಕೂ ಹೆಚ್ಚು ಸಾವುಗಳು ಸಂಭವಿಸಿರುವುದು ಮರಣ ನೋಂದಣಿ ದಾಖಲೆಗಳಿಂದ ಕಂಡು ಬಂದಿದೆ.

2020ರಲ್ಲಿ ಕೊರೊನಾ ಸಾವಿನ ಪ್ರಮಾಣ 1.49 ಲಕ್ಷ ಎಂದು ಸರ್ಕಾರ ಅಧಿಕೃತ ದಾಖಲೆಗಳಲ್ಲಿ ತಿಳಿಸಿತ್ತು. ಆದರೆ, 2020ರಲ್ಲಿ ಕೊರೊನಾದಿಂದಾಗಿ ಭಾರತದಲ್ಲಿ 40 ಲಕ್ಷದಷ್ಟು ಸಾವುಗಳು ಸಂಭವಿಸಿವೆ ಎಂದು ದಿ ಲ್ಯಾನ್ಸೆಟ್ ವರದಿ ಹೇಳಿಕೊಂಡಿತ್ತು.

ಮಂಗಳವಾರ ಬಿಡುಗಡೆ ಮಾಡಿರುವ ಮರಣ ನೋಂದಣಿ ಅಂಕಿ-ಅಂಶಗಳ ಪ್ರಕಾರ, 2020ರ ಸಾವಿನ ಪ್ರಮಾಣ ಹಿಂದಿನ ವರ್ಷಕ್ಕೆ ಹೋಲಿಸಿದರೆ 4.89 ಲಕ್ಷದಷ್ಟು ಹೆಚ್ಚಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ನೀತಿ ಆಯೋಗದ ಸದಸ್ಯ ವಿ.ಕೆ. ಪೌಲ್, ಭಾರತದಲ್ಲಿ ಸಂಭವಿಸಿದ ಕೊರೊನಾ ಸಾವುಗಳ ಬಗ್ಗೆ ಅತಿಯಾಗಿ ವರದಿ ಮಾಡುವುದನ್ನು ಈಗಲಾದರೂ ನಿಲ್ಲಿಸಬೇಕು ಎಂದಿದ್ದಾರೆ.

ಸರ್ಕಾರ ಬಿಡುಗಡೆ ಮಾಡಿರುವ ಜನನ ಹಾಗೂ ಮರಣ ನೋಂದಣಿ ದಾಖಲೆಗಳ ಪ್ರಕಾರ, 2019ರಲ್ಲಿ ದೇಶದಲ್ಲಿ 76.4 ಲಕ್ಷ ಸಾವುಗಳು ಸಂಭವಿಸಿವೆ. 2020ರಲ್ಲಿ 81.2 ಲಕ್ಷ ಜನರು ಸಾವನ್ನಪ್ಪಿದ್ದಾರೆ. ಈ ಅವಧಿಯಲ್ಲಿ ಸಾವುಗಳ ಸಂಖ್ಯೆ 4.75 ಲಕ್ಷದಷ್ಟು ಹೆಚ್ಚಾಗಿದೆ. ಈಗ ವಾಸ್ತವಿಕ ಸಾವುಗಳ ಸಂಖ್ಯೆ ಸ್ಪಷ್ಟವಾಗಿದೆ. ಹೀಗಾಗಿ ಬೇರೆ ಬೇರೆ ಮಾದರಿಗಳನ್ನು ಆಧರಿಸಿ ಸಾವಿನ ಕುರಿತು ಊಹಾಪೋಹ ಮಾಡುವುದನ್ನು ನಿಲ್ಲಿಸಬೇಕು ಎಂದು ಪೌಲ್ ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಘಟನೆ ಸಹ ಇತ್ತೀಚೆಗೆ ಮಾದರಿಯೊಂದರ ಆಧಾರದ ಮೇಲೆ ಸಾವಿನ ಲೆಕ್ಕಾಚಾರ ಪ್ರಕಟಿಸಿತ್ತು. ಇದನ್ನು ತಳ್ಳಿ ಹಾಕಿದ್ದ ಭಾರತ, ಭಾರತದಂತಹ ಭೌಗೋಳಿಕ ಗಾತ್ರ ಹಾಗೂ ಜನಸಂಖ್ಯೆಗೆ ಈ ರೀತಿಯ ಗಣಿತದ ಮಾದರಿಗಳು ಸರಿಯಾಗಿ ಅನ್ವಯವಾಗುವುದಿಲ್ಲ ಎಂದು ಹೇಳಿತ್ತು.

2020ರಲ್ಲಿ ಭಾರತದಲ್ಲಿ 1.49 ಲಕ್ಷ ಜನರು ಕೊರೊನಾದಿಂದ ಸಾವನ್ನಪ್ಪಿದ್ದಾರೆ. ಕೊರೊನಾ ಸಾವುಗಳ ಕುರಿತು ರಾಜ್ಯಗಳು ವಿವರ ನೀಡಿವೆ. ದೇಶದಲ್ಲಿ ಪಾರದರ್ಶಕ ಹಾಗೂ ಉತ್ತರದಾಯಿ ವ್ಯವಸ್ಥೆ ಇದೆ ಎದು ಪೌಲ್ ತಿಳಿಸಿದ್ದಾರೆ.

ಹೆಚ್ಚುವರಿ ಸಾವುಗಳ ಕುರಿತು ಪ್ರತಿಕ್ರಿಯಿಸಿರುವ ಪೌಲ್, ಜನರಿಗೆ ಸಾವುಗಳ ನೋಂದಣಿ ಕುರಿತು ಹೆಚ್ಚು ತಿಳುವಳಿಕೆ ಬಂದಿರುವುದರಿಂದ, ಆಸ್ತಿ ಮತ್ತಿತರೆ ಉದ್ದೇಶಗಳಿಗೆ ಮರಣ ಪ್ರಮಾಣ ಪತ್ರಗಳ ಅಗತ್ಯ ಇರುವುದರಿಂದ ನೋಂದಣಿ ಹೆಚ್ಚಾಗಿರಬಹುದು ಎಂದಿದ್ದಾರೆ.

ಮರಣ ನೋಂದಣಿ ಸುಲಭ ಮಾಡಿರುವುದು ಹಾಗೂ ಡಿಜಿಟಲೀಕರಣದಿಂದಲೂ ಜನರು ನೋಂದಣಿಗೆ ಹೆಚ್ಚಾಗಿ ಬಂದಿರಬಹುದು. ಜನಸಂಖ್ಯೆ ಪ್ರತಿ ವರ್ಷ ಹೆಚ್ಚಾಗುವ ಕಾರಣದಿಂದಲೂ ಸಾವುಗಳ ಸಂಖ್ಯೆ ಹೆಚ್ಚಾಗಿರಬಹುದು ಎಂದವರು ಹೇಳಿದ್ದಾರೆ.

ಇದಕ್ಕೂ ಮುಂಚಿನ ವರ್ಷಗಳಲ್ಲೂ ಸಹ ಸಾವಿನ ನೋಂದಣಿ ದರ ಹೆಚ್ಚಾಗುತ್ತಿತ್ತು. ಆಗ ಯಾವುದೇ ಸಾಂಕ್ರಾಮಿಕವೂ ಹರಡಿರಲಿಲ್ಲ ಎಂದವರು ಹೇಳಿದ್ದಾರೆ. ಕೊರೊನಾ ಅಷ್ಟೇ ಅಲ್ಲದೇ ಬೇರೆ ಕಾರಣಗಳಿಂದಲೂ ಸಾವುಗಳು ಸಂಭವಿಸಿರಬಹುದು ಎಂದವರು ತಿಳಿಸಿದ್ದಾರೆ.

## ಬಡ್ಡಿ ದರ ಹೆಚ್ಚಳದ ನಂತರ ಷೇರು ಪೇಟೆ ಶೇ.2ರಷ್ಟು ಕುಸಿತ

**(1ನೇ ಪುಟದಿಂದ)** ಕುಸಿತ ಕಂಡಿದ್ದು 55,669.03ಕ್ಕೆ ಅಂತ್ಯವಾಗಿದೆ. ಇದು ಶೇ.2.29ರ ಕುಸಿತವಾಗಿದೆ. ಎನ್.ಎಸ್.ಇ. ನಿಫ್ಟಿ 391.50 ಅಂಕಗಳ ಕುಸಿತ ಕಂಡು 16,677.60ಕ್ಕೆ ಅಂತ್ಯವಾಗಿದೆ. ಇದು ಶೇ.2.29ರ ಇಳಿಕೆಯಾಗಿದೆ.


ಟೈಟನ್, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಇಂಡಸ್‌ಇಂಡ್ ಬ್ಯಾಂಕ್, ಹೆಚ್.ಡಿ.ಎಫ್.ಸಿ. ಬ್ಯಾಂಕ್, ಆರ್.ಐ.ಎಲ್., ಏಷಿಯನ್ ಪೇಂಟ್ಸ್, ಮಾರುತಿ ಹಾಗೂ ಡಾ. ರೆಡ್ಡಿ ಷೇರುಗಳು ಕುಸಿತ ಕಂಡಿವೆ. ಪವರ್‌ಗ್ರಿಡ್, ಎನ್.ಟಿ.ಪಿ.ಸಿ. ಹಾಗೂ ಕೋಟಕ್ ಮಹಿಂದ್ರ ಬ್ಯಾಂಕ್ ಷೇರು ಮೌಲ್ಯ ಹೆಚ್ಚಾಗಿದೆ. ಈ ನಡುವೆ, ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ.3.12ರಷ್ಟು ಹೆಚ್ಚಾಗಿ ಪ್ರತಿ ಬ್ಯಾರಲ್‌ಗೆ 108.3 ಡಾಲರ್‌ಗಳಿಗೆ ತಲುಪಿದೆ.

# ರೌಡಿ ಚಟುವಟಿಕೆಗಳಿಗೆ ಆಸ್ಪದ ನೀಡಲ್ಲ

## ಜನತೆ ದೂರು ನೀಡದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿಲ್ಲ: ಎಸ್ಪಿ ರಿಷ್ಯಂತ್

ದಾವಣಗೆರೆ, ಮೇ 4- ಸ್ಥಳೀಯರನ್ನು ಹೆದರಿಸಿ ಹಣ ಮಾಡುವ ಪ್ರಕರಣಗಳು ಇತ್ತೀಚೆಗೆ ಬೆಳಕಿಗೆ ಬಂದಿದ್ದು, ಅಂತಹವರ ವಿರುದ್ಧ ದೂರು ನೀಡದ ಹಿನ್ನೆಲೆಯಲ್ಲಿ ಇಲಾಖೆಯೂ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಯಾರಾದರೂ ದೂರು ನೀಡಿದರೆ, ರೌಡಿಗಳನ್ನು ಹಿಡಿದು ಜೈಲಿಗೆ ಕಳಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ತಿಳಿಸಿದರು.

ದಾವಣಗೆರೆಯಲ್ಲಿ ವೃತ್ತಿ ನಿರತ ರೌಡಿಗಳು ಕಡಿಮೆ ಇದ್ದರೂ, ರೌಡಿ ಶೀಟರ್‌ಗಳು ಬಹಳ ಜನರಿದ್ದಾರೆ. ಕೆಲ ದಿನದ ಹಿಂದಷ್ಟೇ ರೌಡಿ ಶೀಟರ್ ಗಾರೆ ಮಂಜನನ್ನು ಬಂಧಿಸಿ, ಜೈಲಿಗೆ ಕಳಿಸಲಾಗಿದೆ. ಆಯಾ ಠಾಣಾ ವ್ಯಾಪ್ತಿಯಲ್ಲಿ ಬೀಟ್ ಮಾಡಲಾಗುತ್ತಿದೆ. ಸಕ್ರಿಯವಾಗಿ ಇರುವ ರೌಡಿಗಳ ವಿರುದ್ಧ ಗೂಂಡಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗುವುದು. ಅಲ್ಲದೇ ಕಾನೂನು ರೀತಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಆದರೆ ಜನರು ಅಂತಹ ರೌಡಿಗಳ ಬಗ್ಗೆ ದೂರು ನೀಡುತ್ತಿಲ್ಲ. ರೌಡಿಗಳ ವಿರುದ್ಧ ದೂರು ನೀಡದ ಹಿನ್ನೆಲೆಯಲ್ಲಿ ಇಲಾಖೆಯೂ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ತಮ್ಮ ಕಚೇರಿಯಲ್ಲಿ ಇಂದು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.



ಈಗಾಗಲೇ ಅಕ್ರಮ ಮರಳು ದಂಧೆಕೋರರು, ಹಣ ವಸೂಲಿ ಮಾಡುವ, ತಿಂಗಳು ಮಾಮೂಲು ಪಡೆಯುವ, ರೌಡಿಸಂ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಹಲವರನ್ನು ಜೈಲಿಗೆ ಕಳಿಸಲಾಗಿದೆ. ಇಂತಹ ಪ್ರಕರಣಕ್ಕೆ ಸಂಬಂಧಪಟ್ಟಂತೆ 1.25 ಕೋಟಿ ರೂ.ಗಳನ್ನು ರೌಡಿಗಳಿಂದ ಜಪ್ತು ಮಾಡಲಾಗಿದೆ. ಈಗಾಗಲೇ ರೌಡಿ ಪರೇಡ್ ನಡೆಸಿದ್ದು, ಖಡಕ್ ವಾರ್ನಿಂಗ್ ಮಾಡಿದ್ದೇವೆ. ಯಾರೇ, ಎಷ್ಟೇ ದೊಡ್ಡವರು ಇರಲಿ, ಸಾರ್ವಜನಿಕರು ದೂರು ನೀಡಿದರೆ ಮುಲಾಜಿಲ್ಲದೇ ಕ್ರಮ ಕೈಗೊಳ್ಳುತ್ತೇವೆ. ಜನರೂ ಸಹ ಭಯವಿಲ್ಲದೇ ದೂರು ಕೊಡಲಿ, ಉಳಿದಿದ್ದನ್ನು ನಾವು ನೋಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಭೂ ವಿವಾದ ಸೇರಿದಂತೆ ಬೆದರಿಕೆ, ರೌಡಿಸಂ ಮಾಡುವ ಪ್ರಕರಣಗಳಿದ್ದರೆ ಪೊಲೀಸ್ ಠಾಣೆಗೆ ಬಂದು ದೂರು ನೀಡಿ. ಈಗಾಗಲೇ ರೌಡಿ ಪರೇಡ್ ನಡೆಸಿದ್ದು, ಖಡಕ್ ವಾರ್ನಿಂಗ್ ಮಾಡಿದ್ದೇವೆ. ಜನರು ದೂರು ನೀಡಿದರೆ, ಎಂತಹ ರೌಡಿಯನ್ನಾದರೂ ಮಟ್ಟ ಹಾಕುತ್ತೇವೆ. ಇಲ್ಲಿ ರೌಡಿ ಚಟುವಟಿಕೆಗಳಿಗೆ ಆಸ್ಪದ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅಕ್ರಮ ಮರಳುಗಾರಿಕೆ ನಡೆಸುತ್ತಿರುವ ಬಗ್ಗೆಯೂ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ. ಮೈಸೂರು ಇಮ್ರಾನ್ ಸಿದ್ದಿಕಿ ಬಳಿ ಸುಮಾರು 75 ಲಕ್ಷ ರೂ. ವಶಪಡಿಸಿಕೊಂಡಿದ್ದೇವೆ. ಆತನ ಬಳಿ ಎರಡು ಬೆಂಜ್ ಕಾರುಗಳಿವೆ. ಆದರೆ ಕೃತ್ಯಕ್ಕೆ ಬಳಸಿಲ್ಲ. ಐಷಾರಾಮಿ ಜೀವನ ನಡೆಸುತ್ತಿದ್ದ. ಯಾರೇ ಆದರೂ ಕಾನೂನು ವಿರೋಧಿ ಕೃತ್ಯ ಎಸಗಿದರೆ ಕಠಿಣ ಕ್ರಮ ಖಚಿತ.

ಈಗಾಗಲೇ ಹಣಕ್ಕೆ ಬೇಡಿಕೆ ಇಟ್ಟು ಬೆದರಿಕೆ ಹಾಕಿದ್ದ ಮೂವರನ್ನು ಬಂಧಿಸಿದ್ದೇವೆ. ಇನ್ನು ಹಲವರು ಈ ಪ್ರಕರಣದಲ್ಲಿದ್ದಾರೆ. ತನಿಖೆ ಮುಂದುವರೆದಿದೆ. ಈಗ ಸಿಕ್ಕಿಬಿದ್ದಿರುವ ಸಿದ್ಧಿಕಿ ಮಾಮೂಲು ಹಣ ವಸೂಲು ಮಾಡಲು ಜನರನ್ನು ಇಟ್ಟುಕೊಂಡಿದ್ದ ಎಂದು ಹೇಳಿದರು.

# ಅಜ್ಞಾನಿಗಳ ಸಹವಾಸದಿಂದಾಗಿ ಹಾಲುಮತ ಪರಂಪರೆಗೆ ಧಕ್ಕೆ

## ಕೊಕ್ಕನೂರು : ಹೊರಬೀರಪ್ಪನ ಗುಡಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕಾಗಿನಲೆ ಶ್ರೀ ಬೇಸರ

ಮಲೇಬೆನ್ನೂರು, ಮೇ 4- ಅಜ್ಞಾನಿಗಳ ಸಹವಾಸದಿಂದಾಗಿ ಪರಂಪರೆಯುಳ್ಳ ಹಾಲುಮತ ಸಮಾಜದ ಸಂಸ್ಕೃತಿಗೆ ದಕ್ಕೆ ಉಂಟಾಗುತ್ತದೆ ಎಂದು ಕಾಗಿನೆಲೆ ಗುರುಪೀಠದ ಶ್ರೀ ನಿರಂಜಾನಂದಪುರಿ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕೊಕ್ಕನೂರು ಗ್ರಾಮದ ಕೆ.ಎನ್ ಹಳ್ಳಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಕೊಕ್ಕನೂರು, ಜಿ.ಟಿ. ಕಟ್ಟೆ, ಕಂಬತ್ತನಹಳ್ಳಿ ಗ್ರಾಮಗಳ ಹೊರ ಬೀರಪ್ಪನ ದೇವಸ್ಥಾನವನ್ನು ಲೋಕಾರ್ಪಣೆಗೊಳಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಬುಡಕಟ್ಟು ಸಂಸ್ಕೃತಿ ಹೊಂದಿರುವ ಹಾಲುಮತ ಸಮಾಜದಲ್ಲಿ ಬೀರಲಿಂಗೇಶ್ವರ ಸ್ವಾಮಿ ತನ್ನದೇ ಆದ ವೈಶಿಷ್ಟ್ಯ ಹೊಂದಿದೆ. ಈ ಜಗತ್ತಿನಲ್ಲಿ ಹಾಲುಮತ ಸಮಾಜಕ್ಕೆ ಮತ್ತೊಂದು ಹೆಸರೇ ಕಟ್ಟುಲಿಂಗವಂತವೆಂದು ಇದ್ದು, ಜಗದ್ಗುರು ರೇವಣಸಿದ್ಧೇಶ್ವರರ ಹಾದಿಯಾಗಿ ಎಷ್ಟು ಬಹು ದೊಡ್ಡ ಪರಂಪರೆ ಈ ಸಮುದಾಯಕ್ಕೆ ಇದೆ. ಆದರೆ ಆ ಪರಂಪರೆಯ ಕಲ್ಪನೆ ನಿಮಗೆ ಗೊತ್ತಿಲ್ಲದ ಕಾರಣ ಅಜ್ಞಾನಿಗಳ ಸಹವಾಸ ಮಾಡಿ ಸಮಾಜದ ಪರಂಪರಗೆ ದಕ್ಕೆ ಬರುವಂತಹ ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದು ಸ್ವಾಮೀಜಿ ಸಮಾಜದವರನ್ನು ಎಚ್ಚರಿಸಿದರು.

ನಮ್ಮ ಹಾಲುಮತದ ಸಮಾಜದಲ್ಲಿ ದೇವಸ್ಥಾನಗಳಿಗೆ ತನ್ನದೇ ಆದ ಪರಂಪರೆ ಸಾಂಸ್ಕೃತಿಕ ಹಿನ್ನೆಲೆ ಇದೆ. ವಿಜಯನಗರ ಸಾಮ್ರಾಜ್ಯವನ್ನು ಸೃಷ್ಟಿಸಿದ ಹಕ್ಕ-ಬುಕ್ಕರು ಅಲ್ಲಿ ಅಂದು ಸ್ಥಾಪಿಸಿದ ಬೀರಪ್ಪನ ಗುಡಿಯೇ ಇಂದಿನ ವಿರೂಪಾಕ್ಷನ ದೇವಸ್ಥಾನವಾಗಿದೆ. ಹಾಗಾಗಿ ಹಾಲುಮತ ಸಮಾಜದ ಪರಂಪರೆಯ ಕುರುಹುಗಳು ಅಲ್ಲಿವೆ ಎಂದು ಶಾಸನಗಳು, ಸಂಶೋಧಕರು ಹೇಳಿದ್ದಾರೆ. ನೀವು ಇವತ್ತು ಮಾಡುವ ಅಜ್ಞಾನಿಗಳ ಸಹವಾಸದಿಂದಾಗಿ ಅಚಾತುರ್ಯ ಕೆಲಸಗಳಿಂದ ಮುಂದೆ ಹಾಲುಮತ ಸಮಾಜಕ್ಕೆ ದಕ್ಕೆ ಆಗಲಿದ್ದು, ನಿಮ್ಮ ಕೀಳರಿಮೆಯಿಂದ ಅಜ್ಞಾನಿಗಳು ನಮ್ಮ ಸಮಾಜದಲ್ಲಿ ಅಟ್ಟಹಾಸ ಮೆರೆಯುತ್ತಿದ್ದಾರೆ. ಈ ಬಗ್ಗೆ ಜನ ಜಾಗೃತರಾಗಬೇಕೆಂದು ಸ್ವಾಮೀಜಿ ಹೇಳಿದರು.



ಹೊರಬೀರಪ್ಪನ ಗುಡಿಯಲ್ಲಿ ಮೂರ್ತಿಗಳು ಇರುವುದಿಲ್ಲ. ಹಿರಿಯರು ಮಾಡಿದಂತೆ ಪಿಂಡಿಕಾ ರೂಪದಲ್ಲಿ ವಿಗ್ರಹಗಳು ಇರುತ್ತವೆ. ನೀವು ಸಂಸ್ಕೃತಿಯನ್ನು ಹಾಳು ಮಾಡದೆ ಉಳಿಸಿ ಎಂದ ಸ್ವಾಮೀಜಿ, ಕನಕ ಗುರು ಪೀಠ ಸ್ಥಾಪನೆಯಾಗಿ 30 ವರ್ಷ ಕಳೆದರೂ ನೀವು ಮಾತ್ರ ಇನ್ನೂ ಇನ್ನೊಬ್ಬರ ಮಾತು ಕೇಳಿ ದಾರಿ ತಪ್ಪು ಕೆಲಸ ಮಾಡುತ್ತಿರುವುದು ನೋವಿನ ಸಂಗತಿ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಆರೋಗ್ಯಕರ, ಮೂರ್ಖರ ಮಾತನ್ನು ಕೇಳಿದರೆ ನೀವು ಸಮಾಜದ ದ್ರೋಹಿಗಳಾಗುತ್ತೀರಿ. ದೇವಸ್ಥಾನದಲ್ಲಿ ಗಂಟೆ ಭಾರಿಸುವವರು ದೇವರನ್ನು ಕೆಡಿಸುತ್ತಿದ್ದು, ಕೆಲವರು ಫೋನ್ ಪೇ ಮೂಲಕ ದೇವರ ಪ್ರಸಾದ ಕೇಳಿ ದೇವರ ಫೋಟೋವನ್ನು ಹಣ ಕಳುಹಿಸಿದವರಿಗೆ ಕಳುಹಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ತರಾಟೆಗೆ ತೆಗೆದುಕೊಂಡರು.

ಸಮಾಜದ ಬಂಧುಗಳು ಏನು ಸಾಧನೆ ಮಾಡದಿದ್ದರೂ ಪರವಾಗಿಲ್ಲ, ಆದರೆ ಸಮಾಜದ ಪರಂಪರೆ, ಸಂಸ್ಕೃತಿ ಉಳಿಸಿ, ಬೆಳೆಸಲು ಕೆಲಸ ಮಾಡಿ ಎಂದು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕಿವಿಮಾತು ಹೇಳಿದರು.

ಕೊಕ್ಕನೂರು, ಜಿ.ಟಿ ಕಟ್ಟೆ ಮತ್ತಿತರೆ ಗ್ರಾಮಸ್ಥರು ಸೇರಿ ಹೊರಬೀರಪ್ಪನ ಗುಡಿಯನ್ನು ಸುಂದರವಾಗಿ ಕಟ್ಟಿ, ಇದರ ಉದ್ಘಾಟನೆಗೆ 40 ಗ್ರಾಮಗಳಿಂದ ಬೀರ ದೇವರನ್ನು ಕರೆಸಿ ಹೊಸ ಇತಿಹಾಸ ನಿರ್ಮಿಸಿದ್ದೀರಿ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಹಳೇ ಹುಬ್ಬಳ್ಳಿಯ ಕುರುಹಿನ ಶೆಟ್ಟಿ ಸಮಾಜದ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದೊಡ್ಡ ಮನಸ್ಸಿನಿಂದ ಮಾತ್ರ ಇಂತಹ ದೊಡ್ಡ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ರಟ್ಟಿಹಳ್ಳಿ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ದೇವಸ್ಥಾನದಲ್ಲಿ ಬೀರಲಿಂಗೇಶ್ವರ ಚೌಡೇಶ್ವರಿ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಆಶೀರ್ವಚನ ನೀಡಿದರು.

ಮಾಜಿ ಶಾಸಕ ಬಿ.ಪಿ ಹರೀಶ್, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಮಾತನಾಡಿದರು. ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಪಿಎಸ್ಐ ರವಿಕುಮಾರ್, ಜಿ.ಟಿ ಕಟ್ಟೆ ಸಿದ್ದಪ್ಪ, ಕೊಕ್ಕನೂರಿನ ಡಿ.ರಾಮಣ್ಣ, ಕೆ.ಶೇಖರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಕ್ಷಕ ಸಿ.ಜಯಣ್ಣ ಸ್ವಾಗತಿಸಿದರು. ಕಂಬತ್ತ ಹಳ್ಳಿಯ ಗುರುಪಾದಪ್ಪಗೌಡ ಪಾಟೀಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕ ಎನ್.ಜೆ. ನಾಗರಾಜ್ ನಿರೂಪಿಸಿದರು. ಕೊನೆಯಲ್ಲಿ ಶಿಕ್ಷಕ ದಾಸಪ್ಪ ವಂದಿಸಿದರು.

# ಮಲೇಬೆನ್ನೂರಿನಲ್ಲಿ ಸಂಭ್ರಮದ ರಂಜಾನ್

ಮಲೇಬೆನ್ನೂರು, ಮೇ 4- ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿ ಮತ್ತು ಪ್ರೀತಿ-ಸಹೋದರತ್ವದ ಪ್ರತೀಕವಾದ ಪವಿತ್ರ ರಂಜಾನ್ ಹಬ್ಬವನ್ನು ಮಲೇಬೆನ್ನೂರಿನಲ್ಲಿ ಎಲ್ಲರೂ ಒಟ್ಟಾಗಿ ಆಚರಿಸುವ ಮೂಲಕ ಸಾಮರಸ್ಯ ಮೆರೆದರು.

ತಾ.ಪಂ. ಮಾಜಿ ಅಧ್ಯಕ್ಷ ಎಂ.ಬಿ. ರೋಷನ್, ಕೈಗಾರಿಕೋದ್ಯಮಿ ಸೈಯದ್ ಯಾಸ್ಮೀನ್ ಷರೀಫ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಮುಖಂಡ ಸೈಯದ್ ಜಾಕೀರ್, ವೈದ್ಯರಾದ ಡಾ. ನಿಸಾರ್ ಅಹಮದ್, ಡಾ. ಖಾದರ್, ಪುರಸಭೆ ಸದಸ್ಯರಾದ ಸಿ. ಅಬ್ದುಲ್ ಮಜೀದ್, ಸಾಬೀರ್ ಅಲಿ, ನಯಾಜ್, ದಾದಾಪೀರ್, ಶಬ್ಬೀರ್ ಖಾನ್, ಎಂ.ಬಿ. ರುಸ್ತುಂ, ಮಾಜಿ ಸದಸ್ಯ ಎ. ಆರೀಫ್ ಅಲಿ, ಯೂಸುಫ್, ದಾದಾವಲಿ, ಎಂ.ಬಿ ಫೈಜು, ಸಿ.ಅಬ್ದುಲ್ ಹಮೀದ್, ಮುನೀರ್, ರಫೀವುಲ್ಲಾ, ಎಂ.ಬಿ ಖಾದರ್ ಬಾಷಾ, ಮುತಾವಲ್ಲಿ ಬಾಷಾ ಸೇರಿದಂತೆ ಇನ್ನೂ ಅನೇಕರು ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ತಾ.ಗ್ರಾ. ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ.

ತಾ.ಪಂ ಮಾಜಿ ಅಧ್ಯಕ್ಷ ಎಸ್.ಜಿ ಪರಮೇಶ್ವರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಐಎಂಎ ಅಧ್ಯಕ್ಷ ಡಾ.ಬಿ. ಚಂದ್ರಶೇಖರ್, ಡಾ.ಟಿ ಬಸವರಾಜ್, ಮಕ್ಕಳ ತಜ್ಞ ಡಾ.ಶ್ರೀನಿವಾಸ್, ಹಿರಿಯ ವೈದ್ಯ ಮುಖಂಡ ಬಿ.ಮಾರಯ್ಯ, ತಳಸದ ಬಸವರಾಜ್, ಕೆ.ಪಿ.ಗಂಗಾಧರ್ ಭೋವಿಕುಮಾರ್, ಭೋವಿ ಶಿವು, ಕೆ.ಜಿ.ಲೋಕೇಶ್, ಪಿ.ಆರ್ ರಾಜು, ಬಿ. ಮಂಜುನಾಥ್, ಬಿ.ಸುರೇಶ್ ಸೇರಿದಂತೆ ಇನ್ನೂ ಅನೇಕರು ಮುಸ್ಲಿಂ ಬಾಂಧವರಿಗೆ ರಂಜಾನ್ ಶುಭಾಶಯ ಕೋರಿದರು.

ಪಿಎಸ್ಐ ರವಿಕುಮಾರ್ ನೇತೃತ್ವದಲ್ಲಿ ಪಟ್ಟಣದಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.



# ಶ್ರೀ ಬಸವ ಜಯಂತಿ: 'ಅಂಚೆ ಕುಂಚ' ಸ್ಪರ್ಧೆಯ ಫಲಿತಾಂಶ

ದಾವಣಗೆರೆ, ಮೇ 4- ನಗರದ ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಮಿತಿಯ ಆಶ್ರಯದಲ್ಲಿ ಶ್ರೀ ಬಸವ ಜಯಂತಿ ಅಂಗವಾಗಿ ರಾಜ್ಯ ಮಟ್ಟದ ಉಚಿತ 'ಅಂಚೆ ಕುಂಚ' ಸ್ಪರ್ಧೆಯ ಫಲಿತಾಂಶ ಈ ಕೆಳಗಿನಂತಿದೆ ಎಂದು ಸಮಿತಿಯ ಅಧ್ಯಕ್ಷ ಅಥಣಿ ಎಸ್. ವೀರಣ್ಣ ತಿಳಿಸಿದ್ದಾರೆ.

ಸ್ಪರ್ಧೆಯನ್ನು ವಯಸ್ಸಿಗೆ ಅನುಗುಣವಾಗಿ ಎರಡು ವಿಭಾಗಗಳಾಗಿ ವಿಂಗಡಿಸಿದ್ದು ಹಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಇಬ್ಬರು ಹಂಚಿಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಗಂಗಾವತಿಯ ಹನುಮೇಶ್ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಶ್ರೀಮತಿ ಗಾಯತ್ರಿ ಪಾಂಡುರಂಗ ರಾಯ್ಕರ್ ಪಡೆದುಕೊಂಡಿದ್ದಾರೆ.

ದ್ವಿತೀಯ ಬಹುಮಾನ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಮಂಜೇಶ್ವರದ ಶ್ರೀಮತಿ ಸುಗುಣ ಸುರೇಶ್ ಪೈ, ತೃತೀಯ ಬಹುಮಾನ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ಶ್ರೀಮತಿ ಶೀಲವತಿ ವೆಂಕಟರಮಣ ಭಟ್ ಪಡೆದಿರುತ್ತಾರೆ.

ಕಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಇಬ್ಬರು ಮಕ್ಕಳು ಹಂಚಿಕೊಂಡಿದ್ದು ಹಾಸನ ಜಿಲ್ಲೆಯ ಅಡವಳ್ಳಿಯ ಕುಮಾರಿ ಹೆಚ್.ವಿ. ನೇಹಾ, ಚಿಕ್ಕಮಗಳೂರು ಜಿಲ್ಲೆಯ ವಿಜಯಪುರದ ತನ್ಮಯಿ ವಸಿಷ್ಠ ಜಿ. ಪಡೆದಿರುತ್ತಾರೆ. ದ್ವಿತೀಯ ಬಹುಮಾನ ದಾವಣಗೆರೆಯ ದಿಶಾ ವಿ., ತೃತೀಯ ಬಹುಮಾನ ಗದಗ ಜಿಲ್ಲೆಯ ಶಿವ ಸಾಯಿ ನಗರದ ಬಸವ ಸ್ವರೂಪ ಪ. ಬಾಳಿಕಾಯಿ ಪಡೆದಿರುತ್ತಾರೆ.

## 6 ಲಕ್ಷ ಹೆಕ್ಟೇರ್ ಭೂಮಿ ಹಕ್ಕುಪತ್ರ

**(1ನೇ ಪುಟದಿಂದ)** 40 ಸಾವಿರ ಮಂದಿ ತೋಟ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಈ ಭೂಮಿಯನ್ನು ಸರ್ಕಾರದ ಸ್ಥಳವೆಂದು ಘೋಷಣೆ ಮಾಡಿ, ತೋಟಗಾರಿಕೆ ಮಾಡಿಕೊಂಡಿರುವ ಉಳುಮೆದಾರರಿಗೆ 30 ವರ್ಷಗಳ ಕಾಲ ಭೂಮಿಯನ್ನು ಲೀಸ್‌ಗೆ ಕೊಡಲಾಗಿದೆ.

ಆದರೆ, ಸಣ್ಣ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರು ಎಕರೆಗೆ ಇಂತಿಷ್ಟು ಎಂದು ವಾರ್ಷಿಕ ಬಾಡಿಗೆ ಪಾವತಿಸಬೇಕು ಎಂದರು.

ನೂರಾರು ವರ್ಷಗಳಿಂದ ಇದ್ದ ವಿವಾದಕ್ಕೆ ತೆರೆ ಎಳೆದಿರುವುದಲ್ಲದೆ, ಸರ್ಕಾರಿ ಆಸ್ತಿಯನ್ನು ಗಟ್ಟಿ ಮಾಡಿಕೊಂಡಿದ್ದೇವೆ ಎಂದವರು ಹೇಳಿದರು.

ಮೈಸೂರು, ಚಾಮರಾಜನಗರ, ಶಿವಮೊಗ್ಗ ಸೇರಿದಂತೆ ರಾಜ್ಯಾದ್ಯಂತ ಇರುವ ಬಗರ್ ಹುಕ್ಕುಂ ಸಮಸ್ಯೆಗೆ ಶಾಶ್ವತ ತೆರೆ ಬೀಳಲಿದೆ.

ಅರಣ್ಯ ಇಲಾಖೆಯ ವಶದಲ್ಲಿ ಆರು ಲಕ್ಷ ಹೆಕ್ಟೇರ್ ನಷ್ಟು ಭೂಮಿ ಡೀಮ್ಡ್ ಅರಣ್ಯ ಪ್ರದೇಶವೆಂದು ಗುರುತಿಸಲಾಗಿದ್ದು ಮೂಲತಃ ಇದು ಕಂದಾಯ ಇಲಾಖೆಗೆ ಸೇರಿದ್ದು ಎಂದರು.

ಉಳುಮೆದಾರರು 15 ವರ್ಷಕ್ಕಿಂತ ಹೆಚ್ಚು ಕಾಲದಿಂದ ಉಳುಮೆ ಮಾಡುತ್ತಿದ್ದರೆ ಅಂಥವರಿಗೆ ಹಕ್ಕುಪತ್ರ ನೀಡಲು 79ಎ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದರು.

# ಸಂಸ್ಥೆಗಳಿಗೆ 1519 ಕೋಟಿ ರೂ.ಬಿಡುಗಡೆ

**(1ನೇ ಪುಟದಿಂದ)** 123.25 ಕೋಟಿ ರೂಪಾಯಿಗಳು, ಚಿಕ್ಕಬಳ್ಳಾಪುರ ಜಿಲ್ಲೆ(ಚಿಕ್ಕಬಳ್ಳಾಪುರ ನಗರಸಭೆ ಹೊರತುಪಡಿಸಿ): 84.82 ಕೋಟಿ ರೂ, ದಕ್ಷಿಣ ಕನ್ನಡ ಜಿಲ್ಲೆ (ಉಳ್ಳಾಲ ನಗರಸಭೆ, ಸೋಮೇಶ್ವರ ಮತ್ತು ಕೋಟೆಕಾರು ಪಟ್ಟಣ ಪಂಚಾಯಿತಿ ಹೊರತುಪಡಿಸಿ): 72.25 ಕೋಟಿ ರೂ, ಧಾರವಾಡ ಜಿಲ್ಲೆ: 29.75 ಕೋಟಿ ರೂ, ಗದಗ ಜಿಲ್ಲೆ (ಗದಗ-ಬೆಟಗೇರಿ ನಗರಸಭೆ ಹೊರತುಪಡಿಸಿ): 55.25 ಕೋಟಿ ರೂ, ಕೊಪ್ಪಳ: 106.25 ಕೋಟಿ ರೂ, ಹಾವೇರಿ ಜಿಲ್ಲೆ (ಶಿಗ್ಗಾಂವ್, ಬಂಕಾಪುರ, ಸವಣೂರು ಪುರಸಭೆ ಹೊರತುಪಡಿಸಿ): 97.75 ಕೋಟಿ ರೂ, ರಾಯಚೂರು ಜಿಲ್ಲೆ (ಮಾನ್ವಿ, ಜಾಲಹಳ್ಳಿ ಪುರಸಭೆ ಮತ್ತು ಕವಿತಾಳ ಪಟ್ಟಣ ಪಂಚಾತಿಯಿ ಹೊರತುಪಡಿಸಿ): 110.50 ಕೋಟಿ ರೂ, ಯಾದಗಿರಿ ಜಿಲ್ಲೆ: 114.75 ಕೋಟಿ ರೂ, ಬೀದರ್ ಜಿಲ್ಲೆ: 97.75 ಕೋಟಿ ರೂ, ಶಿವಮೊಗ್ಗ ಜಿಲ್ಲೆ: 106.25 ಕೋಟಿ ರೂ, ಬಾಗಲಕೋಟೆ ಜಿಲ್ಲೆ: 208.25 ಕೋಟಿ ರೂ, ಉತ್ತರ ಕನ್ನಡ ಜಿಲ್ಲೆ: 143.02 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿ ಒಪ್ಪಿಗೆ ನೀಡಿದೆ.

ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ -4ನೇ ಹಂತದ ಯೋಜನೆಯಡಿ 3885.00ಕೋಟಿ ರೂ ಮೊತ್ತದ ಕ್ರಿಯಾ ಯೋಜನೆಗೆ ರಾಜ್ಯ ಸಚಿವ ಸಂಪುಟ ಕಳೆದ ಜನವರಿಯಲ್ಲಿ ಅನುಮೋದನೆ ನೀಡಿತ್ತು. ಅದಕ್ಕೆ ಪೂರಕವಾಗಿ ಈ ಬಾರಿಯ 15 ಜಿಲ್ಲೆಗಳು ಸೇರಿದಂತೆ, ಈವರೆಗೆ 25 ಜಿಲ್ಲೆಗಳ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯ 2367.57 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿದಂತಾಗಿದೆ.

# ಹರಿಹರ : ಸಮಾಜ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಕಡತಗಳ ಅವ್ಯವಸ್ಥೆ

ಹರಿಹರ, ಮೇ 4 - ನಗರದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಡತಗಳ ಬಗ್ಗೆ ಕಾಳಜಿ ತೋರದೆ ಅವ್ಯವಸ್ಥಿತವಾಗಿ ಇರಿಸಲಾ ಗಿದೆ ಎಂದು ಸಾರ್ವಜ ನಿಕರು ದೂರಿದ್ದಾರೆ.



ನಗರದ ಹಳೆ ಪಿ.ಬಿ. ರಸ್ತೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಳೆದ ಹಲವಾರು ವರ್ಷಗಳಿಂದ ಸಣ್ಣದಾದ ಕಟ್ಟಡದ ಕೊಠಡಿಯಲ್ಲಿ ಕಡತಗಳನ್ನು ನೀಟಾಗಿ ಇಡಲಾಗಿತ್ತು. ಆದರೆ ಹೊಸ ಕಟ್ಟಡದಲ್ಲಿ ಸಾರ್ವಜನಿಕರ ಕಡತಗಳನ್ನು ಎಲ್ಲೆಂದರಲ್ಲಿ ಕಸದ ರಾಶಿ ತರಹದಲ್ಲಿ ಬಿಸಾಡಲಾಗಿದೆ. ಸಂಬಂಧಿಸಿದ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಕಡತಗಳನ್ನು ಸರಿಯಾದ ರೀತಿಯಲ್ಲಿ ಜೋಡಿಸಿ ಇಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಬಡ್ಡಿ ದರ ಹೆಚ್ಚಿಸಿದ ರಿಸರ್ವ್ ಬ್ಯಾಂಕ್

**(1ನೇ ಪುಟದಿಂದ)** ಮೊದಲ ಬಾರಿಗೆ ರೆಪೋ ದರವನ್ನು ಪೂರ್ವ ನಿಗದಿತವಲ್ಲದ ಸಮಯದಲ್ಲಿ ಹಣಕಾಸು ನೀತಿ ಸಮಿತಿ ಸಭೆ ನಡೆಸಿ ಕ್ರಮ ತೆಗೆದುಕೊಳ್ಳಲಾಗಿದೆ.

ಜನವರಿ ತಿಂಗಳಿನಿಂದಲೂ ಹಣದುಬ್ಬರ ದರ ಶೇ.6ಕ್ಕಿಂತ ಹೆಚ್ಚಾಗಿದೆ. ಆದರೆ, ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ಅವರು ಬಡ್ಡಿ ದರ ಯಥಾಸ್ಥಿತಿಯಲ್ಲಿ ಮುಂದುವರೆಸಲು ಒಲವು ತೋರಿದ್ದರು. ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರ ಶೇ.6.9ರಷ್ಟಿತ್ತು.


**ಪುರಸಭಾ ಕಾರ್ಯಾಲಯ** ಹರಪನಹಳ್ಳಿ, ವಿಜಯನಗರ ಜಿಲ್ಲೆ.

ದೂರವಾಣಿ ಸಂ. 08398-280258 ಇ-ಮೇಲ್: itstaff_uib_harapanahalli@yahoo.com

ಕ್ರ.ಸಂ: ಪುಸ:ಹಹಳ್ಳಿ:/ತಾಂತ್ರಿಕ/ಸಿಆರ್/1/2022-23 ದಿನಾಂಕ : 04.05.2022

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್**

2021-22ನೇ ಸಾಲಿನ ಎಸ್.ಎಫ್.ಸಿ (ಸಾಮಾನ್ಯ ತೆರಿಗೆ) ಅವತರಣದ ಕುಡಿಯುವ ನೀರಿನ ಹಣಕಾಸು ಮತ್ತು 2020-21ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಈ ಕೆಳಗಿನ ಇಂಡೆಂಟ್‌ಗಳ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001ರ ಅನ್ವಯ ಕೆ.ಡಬ್ಲ್ಯೂ-1 ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಅರ್ಹ ಮತ್ತು ನೋಂದಾಯಿತ ಸರಬರಾಜುದಾರರು ನಿಬಂಧನೆಗಳನ್ನೊಳಗೊಂಡ ದಸ್ತಾವೇಜುಗಳನ್ನು ಮತ್ತು ವಿವರಗಳನ್ನು https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) |
|---|---|---|---|
| 1 | DMA/2021-22/WS/WORK_INDENT1131366 | 3.00 | 7500.00 |
| 2 | DMA/2021-22/WS/WORK_INDENT1131365 | 7.875 | 19,700.00 |

ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 18.05.2022** ಸಾಯಂಕಾಲ 5 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯು **ದಿನಾಂಕ : 19.05.2022** ಸಂಜೆ 5.10 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- **(ಶ್ರೀ ಮಂಜುನಾಥ್ ಇಜಂತಕರ್)** ಅಧ್ಯಕ್ಷರು, ಪುರಸಭೆ, ಹರಪನಹಳ್ಳಿ

ಸಹಿ/- **(ಶ್ರೀಮತಿ ಭೀಮವ್ವ ಸಣ್ಣ ಹಾಲಪ್ಪ)** ಉಪಾಧ್ಯಕ್ಷರು, ಪುರಸಭೆ, ಹರಪನಹಳ್ಳಿ

ಸಹಿ/- **(ಶ್ರೀ ಎರಗುಡಿ ಶಿವಕುಮಾರ್,** ಕೆ.ಎಂ.ಎ.ಎಸ್ ಶ್ರೇಣಿ-1**)** ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ






# ಸಮಾಪಕ-ಅಸಮಾಪಕ-ಚಲನಚಿಂತನಶೀಲ ಗ್ರಸ್ತ ಬಸವಣ್ಣ

ವಚನ ಪಾಂಡಿತ್ಯ ಕನ್ನಡ ಸೀಮೆಯ ಮೊದಲ ಜನ-ಜೀವನ ಸಾಹಿತ್ಯವಾಗಿ ನಮ್ಮ ಪರಂಪರೆಯ ಅದ್ಭುತ ಸಾಂಸ್ಕೃತಿಕ ಆಸ್ತಿಯಾಗಿದೆ. 900 ವರ್ಷಗಳ ಇತಿಹಾಸವುಳ್ಳದ್ದಾಗಿ, ಕ್ರಾಂತ ಸಾಹಿತ್ಯ ಪ್ರಕಾರವಾಗಿದೆ. ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣವನ್ನು ಅನುಷ್ಠಾನಗೊಳಿಸಲು ಹೋರಾಡಿದ ಶರಣೈಕ್ಯಾತ್ಮರ ಸಾಹಿತ್ಯವಾಗಿದೆ. ಸತ್ಯಸ್ಯ ಸತ್ಯ ಪ್ರತಿಗಾಮಿಗಳ ವಿರುದ್ಧ, ಸಮಾಜದ ನೊಂದ ಜೀವಿಗಳ ಜೀವಪರ ಧ್ವನಿಯನ್ನು ಗಟ್ಟಿ ದಟ್ಟವಾಗಿ ಎಬ್ಬಿಸಿದ ನುಡಿಗಡಣವಾಗಿದೆ. ವಿದ್ವತ್ ಜನತಾ ಪ್ರತಿಭಾ ಸಾಹಿತ್ಯಕ್ಕಿಂತ, ದೈಹಿಕ ಶ್ರಮದ ಜನತಾ ಪ್ರತಿಭಾ ಸಾಹಿತ್ಯವಾಗಿದೆ.

12ನೇ ಶತಮಾನದಲ್ಲಿ ರಾಜಕೀಯ ಪರಿಸ್ಥಿತಿಯಿಂದ ಜನಜೀವನದ ಧಾರ್ಮಿಕ ಸ್ಥಿತಿಯು, ರಾಜಕೀಯ ಸ್ಥಿತಿಯಂತೆ ಕದಡಿ ಬಗ್ಗಡವಾಯಿತು. ಇಂತಹ ಅನಿಶ್ಚಿತತೆಯಿಂದ ಧರ್ಮ ಅವರ ಕೈ ತಪ್ಪಿ ಸ್ವಾತಂತ್ರ್ಯದ ಕಹಳೆಯನ್ನು ಊದಿತು. ಸಮಾಜದ ಧಾರುಣ ಸ್ಥಿತಿಯನ್ನು ಕಂಡು ಕೆಲವು ವಿಚಾರ ಪರರ ಮನಸ್ಸು ಕರಗಿ, ಸಮಾನ ಸ್ವಾತಂತ್ರ್ಯದ ತಳಹದಿಯ ಮೇಲೆ ನೂತನ ಸಮಾಜವನ್ನು ಕಟ್ಟಲು ಕೈ ಹಾಕಿದರು; ಅವರೇ ವಚನಕಾರರು. ಈ ವಚನಕಾರರ ಸಂದೋಹದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರೇ ಜೀವಕಳೆಯಿಂದ ಹೂಡಿ ಅನನ್ಯರಾಗಿ, ಅನೂಹರಾಗಿ, ಅಮೂಲ್ಯರಾದವರು.

ಬಸವಣ್ಣನವರ ಗುರಿ ಜನಜಾಗೃತಿ. ಆತ್ಮೋದ್ಧಾರದ ಮಾರ್ಗ ಸರ್ವರ ಸ್ವತ್ತಾಗಬೇಕೆಂಬ ಬಯಕೆ. ಪಂಡಿತ-ಪಾಮರರಿಬ್ಬರಿಗೂ ಸಮಾನ ಪುರಸ್ಕಾರ. ಸ್ಥಲಗಳ ತೊಡಿಗೆಯುಟ್ಟವರು. ಅನುಭವದ ಆಳದಿಂದ ಹೃದಯಕ್ಕೆ ಮುಟ್ಟುವ ರೀತಿಯಲ್ಲಿ ಸರಳ ಕ್ರಮದಿಂದ ವಚನವೆಂಬ ನುಡಿಯನ್ನಾಡಿದವರು. ನಿರ್ಭಯ-ನಿರ್ದಾಕ್ಷಿಣ್ಯ ವಾದ, ವಿಚಾರ ಕೊರತೆಯನ್ನು; ಮುತ್ತಿನ ಮಣಿಯಂತೆ ಹೊಳೆಯುವ ತಿಳಿಗನ್ನಡದ ನುಡಿಯನ್ನು; ಎಲ್ಲ ಜನಕ್ಕೂ ಬೆಳಕನ್ನು ಬೀರಬೇಕೆಂಬ ದೊಡ್ಡ ನೋಟವನ್ನು; ಸಾಹಿತ್ಯ-ಸಿದ್ಧಾಂತ-ಸಾಕ್ಷಾತ್ಕಾರ ಸತ್ಯದ ದರ್ಶನವನ್ನು; ವೈಯಕ್ತಿಕ ಮನೋಭಾವ; ಅಂತರಂಗದ ಹೋರಾಟ ಮತ್ತು ಧರ್ಮ ಬೋಧೆಯನ್ನು ಬಿತ್ತುವುದರ ಮೂಲಕ ಜನಜಂಗುಳಿಯಲ್ಲಿ ಸೇರಿ, ನುಡಿದಂತೆ ನಡೆದು, ನಡೆದಂತೆ ನುಡಿದು, ನೀತಿಯನ್ನು ಹೇಳಿ, ತತ್ವವನ್ನು ತಿಳಿಸಿ, ಡೊಂಕುಗಳನ್ನು ತಿದ್ದಿ, ದುರಾಚಾರವನ್ನು ಖಂಡಿಸಿ, ಮನುಷ್ಯರೊಡನೆ ಮನುಷ್ಯರಾಗಿ ಸಂಯೋಜಕ ಶಕ್ತಿಯಿಂದ ವಿಚಾರಗಳ ಸಹಯೋಗದಿಂದ ಸಮಾಪಕ ಅಸಮಾಪಕಗಳನ್ನು ಸಮಾಜದಲ್ಲಿ ಕಂಡುಕೊಂಡು, ಗುಪ್ತ ಸಮಾಜದ ದೀಕ್ಷಾಬದ್ಧ ಸದಸ್ಯನಾಗಿ, ನೆಮ್ಮದಿಯ ನಾಡನ್ನು ಆದರ್ಶದ ನಾಡನ್ನು ಕಟ್ಟಲು ಭಕ್ತಿಯೇ ಪರಮ ಪವಿತ್ರ ಧರ್ಮ ಮಾರ್ಗವೆಂದು ತಿಳಿದುಕೊಂಡು, ಆಡುವುದಕ್ಕಿಂತ ಮಾಡಿ ತೋರಿಸುವುದು ಶ್ರೇಷ್ಠವೆಂದು, ಸ್ವಾರ್ಥ ಮಾತ್ರವೇ ಪಾಪವೆಂದು, ಮಹೋನ್ನತ ವಿಚಾರಗಳ ಪುನರ್‌ಸಂಗ್ರಹ, ಸುಶಾಂತತೆಯಲ್ಲಿ ಎಂಬುದನ್ನರಿತ ಪ್ರತಿಭಾ ಸಿತ್‌ಸತ್ಯ ಪ್ರಕಾಶಕ.



***ಕ್ಷಣದಲ್ಲಿ ಆಕಾಶಕ್ಕೆ ಐದುತ್ತದೆ,***
***ಕ್ಷಣದಲ್ಲಿ ದಿಗ್ದಸೆಗೆ ಐದುತ್ತದೆ,***
***ಕೂಡಲಸಂಗಮದೇವ***

ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ, ಎಂಬದು ನಿಮ್ಮನೊಡಗೂಡವೆನಯ್ಯ : ಎಂಬಲ್ಲಿ ಮೃಗಗಳು ಹುಟ್ಟುಗುಣಗಳ ಪ್ರಾಬಲ್ಯದಿಂದ ಮಾತ್ರ ವರ್ತಿಸುತ್ತವೆ. ಆದರೆ, ಮನುಷ್ಯ ಹಾಗಲ್ಲ. ಅನೇಕ ಸಂದರ್ಭಗಳಲ್ಲಿ ಸಾಕಷ್ಟು ಪ್ರಚೋದನೆಗಳಿಗೆ ಒಳಗಾಗಿ ಪ್ರತಿಕ್ರಿಯೆಗಳನ್ನು ಬಿಂಬಿಸುತ್ತಾನೆ. ಒಂದು ವಸ್ತುವನ್ನು ನೋಡಿದಾಗ ಜಾಗ್ರತ ಮನಸ್ಸು ಅಜಾಗ್ರತಿಗೆ ಒಳಗಾಗಿ ಪ್ರಲೋಭನಕ್ಕೆ-ಉದ್ದೀಪನಕ್ಕೆ ಸಿಲುಕಿ ಪ್ರಮತ್ತ ಪ್ರತೀಕಾರದಿಂದ ಅಸ್ಸೀಮ ಲೋಭದಿಂದ, ವಿಕೃತ ವಿಕಾರ ವಿರಾಡ್ರೂಪಕ್ಕೆ, ಮನಸ್ಸು ಜಿಗಿಯುತ್ತದೆ. ಇಂತಹ ಸ್ಥಿತಿಯ ವಿಧಿ ಹಿಡಿದು ಬೇರೊಂದು ರೀತಿಯಲ್ಲಿ ಕಾರ್ಯ ಮಾಡುವುದು ಒಳ್ಳೆಯದು. ಮನದಲ್ಲಿ ಬಂದ ಬಯಕೆಯನ್ನು ಹೊಡೆದು ಹಾಕಬೇಕು. ಮನೋಮುದ್ರೆಗಳು, ಬಾಹ್ಯ ವಾಸ್ತವತೆಯನ್ನು ವೈಯಕ್ತಿಕ ದೃಷ್ಟಿಯಾಗಿ ಸಮೀಪಿಸಿಕೊಳ್ಳುತ್ತವೆ. ಇವೆಲ್ಲವನ್ನೂ ದೂರೀಕರಿಸಲು ಜಟಿಲವಾದ ಮನುಷ್ಯ ಸ್ವಭಾವದ ಕೆಲವು ಪರಿಗಳನ್ನು ಅವುಗಳ ಅತ್ಯಂತ ಸೂಕ್ಷ್ಮ ಸ್ಥರದಲ್ಲಿ ದರ್ಶಿಸಿ, ನಿಜದ ಮೇಲೆ ಬೆಳೆಸಲು ನಿಮ್ಮನೊಡಗೂಡಿದಾಗ ಸಾಧ್ಯವೆಂದು ಈ ವಚನ ತಿಳಿಸುತ್ತದೆ.

ವಚನಕಾರರ ಕೇಂದ್ರ ವ್ಯಕ್ತಿ ಅಲ್ಲಮ. ಕಾಯಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಅರಗಿಸಿಕೊಂಡು, ಇತರೆ ಶರಣರನ್ನು ಅಗತ್ಯವಾದ ಭಿತ್ತಿಯೊಂದರಿಂದ ಗುರುತಿಸಿದರು. ಆ ವ್ಯಕ್ತಿಯೇ ಬಸವಣ್ಣ. ಬಸವಣ್ಣನವರ ವ್ಯಕ್ತಿತ್ವ ಕಲ್ಯಾಣದೊಳಗೆ ಮಹತ್ತರ ಸಾಧನೆಯಲ್ಲಿ ತೊಡಗಿದ್ದು, ಬಸವಣ್ಣನವರ ಕಾರ್ಯಕ್ಷೇತ್ರ ವಿಸ್ತಾರವಾದ ಗೋಡೆಯಾಗಿ ಪರಿಣಮಿಸಿತು. ಸಹಭಾವದ ಮೂಲಕ ಭಕ್ತಿ ಮತ್ತು ಕಾಯಕ ಎರಡನ್ನೂ ಎಳೆದು ತಂದು ಸೇರಿಸುವ ಅನುಭವದ ಅರಿವು ವಚನಕಾರರ ಮನಸ್ಸಿಗೆ ಲೇಪಿಸುವುದರಿಂದ ಸಾರ್ಥಕವಾದನು.

'ಅಯ್ಯಾ ನಿಮ್ಮ ಅನುಭಾವಿಗಳ ಸಂಘದಿಂದ ಎನ್ನ ತನು ಶುದ್ಧವಾಯಿತು': ಎನ್ನುವಲ್ಲಿ ಸಮಕಾಲೀನ ಸಂದರ್ಭಗಳ ಹೊಳಹುಗಳಿವೆ. ಭಕ್ತಿ ಮತ್ತು ಜ್ಞಾನಗಳ ಸಾರ್ವತ್ರಿಕ, ಸಾರ್ವಕಾಲಿಕ ಚಿಂತನೆಗಳ ಕಂಪಿತವಿದೆ. 'ಜನನವಿಲ್ಲದ ಜನಿತನು ನೀನು ನೋಡಯ್ಯ' ಎಂಬ ವಚನ ಬಸವಣ್ಣನವರ ಮನೋಧರ್ಮದ ಮನೋರಕ್ಷಣಾ ಯಂತ್ರದೊಳಗಿನ ಹೊರಹೊಮ್ಮಿದ ಬೆಳಕು.

ಬಹುಪ್ರಮುಖವಾಗಿ ಗಮನಿಸಬೇಕಾದ ಅಂಶ, ಅವರ ಅಂಕಿತನಾಮ 'ಕೂಡಲಸಂಗಮದೇವ'. ಕೂಡಲಸಂಗಮದೇವ ಬಸವಣ್ಣ ಶಿವನಿಗೆ ಕೊಟ್ಟ ಹೆಸರು. ಇದೊಂದು ಸ್ವತಂತ್ರ ಸಾರ್ಥಕ ಘಟಕ ಕನ್ನಡದ 'ಕೂಡಲ' ಸಂಸ್ಕೃತದ 'ಗಮ' ಧ್ವನಿಗಳು ಕೊಡುವ ಅರ್ಥ ಒಂದೇ. ಎರಡು ಹೊಳೆಗಳು ಒಂದನ್ನೊಂದು ಕೂಡುವ ಸ್ಥಲ ಅಂದರೆ ಕನ್ನಡದ 'ಕೂಡು' ಸಂಸ್ಕೃತದ 'ಗಮ' (ಚಲಿಸುವುದು), ಗಮ ಶಬ್ದಕ್ಕೆ ಬಲು ಸನಿಹವಿದೆ. ಹೀಗೆ 'ಕೂಡು' 'ಗಮ'ಗಳು 'ಕೂಡಿ' ಬಂದಿರುವುದರಿಂದ 'ಕೂಡುವಿಕೆ' 'ಹೋಗುವಿಕೆ'ಯು ಕೂಡಿಯೇ ನಡೆದಂತಾಗಿದೆ. ದೈವಾಂಶದ ಕಲ್ಪನೆಯ ಮೇಲೆ ಬೆಳಕು ಚೆಲ್ಲುತ್ತದೆ. ದೈವತ್ವವು ಇಲ್ಲಿ ಚಲನೆ-ಜಂಗಮತ್ವ ಹೋಗುವಿಕೆ-ಹೋಗುವುದು ಶಿವನೊಂದಿಗೆ ಒಂದಾಗುವ ಭಕ್ತನು, ಚಲನೆಯೊಂದಿಗೆ ಹೊಂದಾಗುತ್ತಾನೆ; ಶಿಲ್ಪಿತ ಒಂದಾಣಿಕೆಯಾಗುತ್ತಾನೆ. ಅಂದರೆ ಇಲ್ಲಿಯ ದರ್ಶನ ಧ್ಯೇಯ ಮತ್ತು ಸೂಸುವಿಕೆಯು ಬಸವಣ್ಣನವರ ವ್ಯಕ್ತಿತ್ವದ ಕಡಲ್ಗಾಲುವೆಗಳ ಕ್ರಮ ಸಹಿತ್ವಗಳನ್ನು ಗಮನಿಸಬಹುದು.

ಕಲ್ಯಾಣದ ಶರಣರದು ಕನ್ನಡ ಸೀಮೆಯಲ್ಲಿ ನಡೆದ ಸಮಾಜೋಧಾರ್ಮಿಕ ಆಂದೋಲನ. ಬಸವಣ್ಣ ಕನ್ನಡ ನಾಡಿನಲ್ಲಿ ಬಾಳಿ, ಕನ್ನಡದಲ್ಲಿ ಬರೆದವರು. ಈ ಮಿತಿಯಿಂದ ನ್ಯಾಯವಾಗಿ ಸಿಗಬೇಕಾದ 'ಜಾಗತಿಕ ಪ್ರಸಿದ್ಧಿ' ದೊರೆಯಲಿಲ್ಲವಾದರೂ, ಅಖಂಡ ಕರ್ನಾಟಕದಲ್ಲಿ ಮಹಾಪುರುಷನಾಗಿ ಅಸಮತೆಯ ಸಂಹೃತಿಯಾಗಿ, ಸಮತೆಯ ಸಂತ್ರಾಣಿಯಾಗಿ, ಸಮ ಸಂಸ್ಕೃತಿಯ ಸಕಲಾತಿಯಾಗಿ, ನಿಕಷನಾಗಿ, ಕಮರಬಂದನಾಗಿ ಮೆರೆದಿದ್ದಾನೆ. ಯುಗಪುರುಷ ಮತ್ತು ಮಹಾಪುರುಷರಲ್ಲಿ ಬಿಡಿಬಿಡಿಯಾಗಿ ಕಂಡರು ಬಸವಣ್ಣ ಸಮಗ್ರ ಯುಗಮಹಾಪುರುಷನಾಗಿ ಬೆಳೆದಿದ್ದಾನೆ. ರಾಜಸತ್ತೆ-ಮತಸತ್ತೆಗಳು ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿದ್ದ ಸಂದರ್ಭದಲ್ಲಿ, ಜೀವನ ವ್ಯವಸ್ಥೆಯ ಸಮತೋಲನಾ ಅನ್ಯಾಯದ ಗರ್ಭಸೀಳಿ ಜಾತ್ಯನಾದ. ಸಮಸಮನ್ವಯ ಸಮತೋಲನೆಗಾಗಿ ಅವುಡುಗಚ್ಚಿದವನು ಬಸವಣ್ಣ.

ಬಾಗೇವಾಡಿಯ ಮಂಡಗೆ ಮಾದಿರಾಜ ಮಾದಲಾಂಬಿಕೆ ಉದರದಲ್ಲಿ ಜನಿಸಿದ ಬಸವಣ್ಣ. ಮಂಡಗೆ-ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಅರ್ಜುನವಾಡ (ತರ್ಧವಾಡಿ ಮಧ್ಯಗ್ರಾಮ)ದ ನೆರೆಯಲ್ಲಿ ಹಾಳಾಗಿರುವ ಕವಿಳಾಸಪುರದಲ್ಲಿ ಬಸವಣ್ಣನವರ ವಂಶಜರು ವಾಸವಾಗಿದ್ದುದು ಸಂಶೋಧಕರ ಗಮನಕ್ಕೆ ತೋರಿದೆ. ಆದ್ದರಿಂದ ಮಂಡಗೆ ಮಾದಿರಾಜ ಎಂಬ ಅಡ್ಡ ಹೆಸರು ಬಂದಿರಬಹುದೆಂಬ ಸೂಚನೆ.

ಕರ್ನಾಟಕದಲ್ಲಿ ಅಗ್ರಹಾರ ಸಂಸ್ಕೃತಿ ಮತ್ತು ದೇವಾಲಯ ಸಂಸ್ಕೃತಿಗಳು ಆಳುತ್ತಿದ್ದ ಕಾಲದಲ್ಲಿ ಬಸವಣ್ಣ ಸ್ಥಗಿತ ಮೌಲ್ಯದ ಅಗ್ರಹಾರದ ಸಂಸ್ಕೃತಿಯನ್ನು ನಿರಾಕರಿಸಿ ಅಂದರೆ ಭಾರತ ಸಂಸ್ಕೃತಿಯ ನಿರಾಕಾರಣದಿಂದ ಅಂಗೀಕಾರ ತತ್ವವನ್ನು ಹೊಂದಿ ಚಲನಶೀಲ ಮೌಲ್ಯದ ದೇವಾಲಯ ಸಂಸ್ಕೃತಿಯನ್ನು ಒಪ್ಪಿಕೊಂಡು 'ಕರ್ಮದಿಂದ ಧರ್ಮಕ್ಕೆ' 'ಅಂಗದಿಂದ ಲಿಂಗಕ್ಕೆ' ಪರಿವರ್ತಿಸಿಕೊಂಡ ಕಾಲಘಟ್ಟ ಕೂಡಲಸಂಗಮ. ಆತ್ಮಕಲ್ಯಾಣದಿಂದ ಸಮಾಜ ಕಲ್ಯಾಣದಲ್ಲಿ ತೊಡಗಿಸಿಕೊಂಡು 'ಲಿಂಗದಿಂದ ಜಂಗಮಕ್ಕೆ' ವಿಸ್ತರಿಸಿಕೊಂಡದ್ದು ಕಲ್ಯಾಣದಲ್ಲಿ. ವ್ಯಕ್ತಿ ಜೀವನದಷ್ಟೆ ಸಮಾಜ ವ್ಯವಸ್ಥೆ ಪ್ರಮುಖವೆಂಬುದನ್ನು ಅರಿತು ವಚನಗಳಲ್ಲಿ ಚಿಂತನೆಯು ಅನುಭಾವವಾಗಿ, ಭಾಷೆಯು ರೂಪಕವಾಗಿ ಪರಿಗಣಿಸಿ, ಐಕ್ಯದಿಂದ ಹೊರಹೊಮ್ಮಿ ಸೂಚ್ಯ ಹಾಗೂ ಲಘು ಸೂಚ್ಯವಲ್ಲದ ರಚನಾ ವಿನ್ಯಾಸ, ಬೌದ್ಧಿಕ-ಭಾವನಾತ್ಮಕ-ನೈತಿಕ ಪ್ರತಿಕ್ರಿಯೆಯನ್ನು ವಿಶ್ಲೇಷಿಸುತ್ತಾ ಒಂದು ರೀತಿಯ ಒಳದಿಳಿವು, ಸಹಜ ಜ್ಞಾನ, ಸ್ವಯಂ ಪ್ರಕಾಶ, ಅಂತರ್‌ಜ್ಞಾನ, ಅಂತರ್‌ದೃಷ್ಟಿ, ಅಂತರ್‌ಬೋಧನೆ, ಸಮಾಜದ ಕಗ್ಗತ್ತಲೆಯ ಭ್ರಮಣ ಪ್ರಪಂಚದ ಚಟುವಟಿಕೆ, ಬಸವಣ್ಣನ ಅಭಿವ್ಯಕ್ತಿಗೆ ಪ್ರತಿಭಾವನೆ ಮೂಲವೆಂಬಲ್ಲಿ ವಚನಗಳ ಅಬಂಧಿತ ನುಡಿಗಡಣ, ನುಡಿಗಡಣವು ಪ್ರಸ್ತುತ ಕನ್ನಡ ನಾಡಿನಲ್ಲಿ ಚಿರಂತನ ಗೌರವಕ್ಕೆ ಪಾತ್ರವಾಗಿದೆ.

ಬಸವ ಜಯಂತಿ ಆಚರಣೆ ಅಕ್ಷಯ ತೃತೀಯ 26.04.1913 ರಂದು ಸ್ವಾತಂತ್ರ್ಯ ಹೋರಾಟಗಾರ ಹರ್ಡೇಕರ್ ಮಂಜಪ್ಪನವರು, ಪೂಜ್ಯ ಶ್ರೀ ಶ್ರೀ ಶ್ರೀ ಮುರುಘ ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ದಾವಣಗೆರೆಯ ವಿರಕ್ತಮಠದ ಪ್ರಾಂಗಣದ ಒಳಗೆ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಉತ್ತರೋತ್ತರ ಸಂವೃದ್ಧಿಯಾಗಿ ಬೆಳೆದದ್ದು ಇಂದಿಗೂ ಜೀವಂತ ಸಾಕ್ಷಿ.



**ಪ್ರೊ|| ಬಾತಿ ಬಸವರಾಜ್**
ಶೈಕ್ಷಣಿಕ ಸಲಹೆಗಾರರು,
ದವನ ಕಾಲೇಜು, ದಾವಣಗೆರೆ.
ಮೊಬೈಲ್: 8884527130

## ಶಾಮನೂರಿನಲ್ಲಿ ಬಸವ ಜಯಂತಿ



ದಾವಣಗೆರೆ, ಮೇ 4- ಬಸವ ಜಯಂತಿ ಪ್ರಯುಕ್ತ ಶಾಮನೂರಿನಲ್ಲಿ ಬಸವೇಶ್ವರರ ಭಾವಚಿತ್ರದ ಮೆರವಣಿಗೆಯನ್ನು ಇಂದು ಗ್ರಾಮದ ರಾಜಬೀದಿಗಳಲ್ಲಿ ನಡೆಸಲಾಯಿತು. ಹೆಚ್.ಜಿ. ಹನುಮಂತಪ್ಪ, ಎನ್. ಓಂಕಾರಪ್ಪ, ಎನ್. ಗಂಗಪ್ಪ, ಜಿ. ಪರಮೇಶ್ವರಪ್ಪ, ಬಿ.ಹೆಚ್.ಅಜ್ಜಪ್ಪ, ಎ.ವಿ. ದೇವರಾಜ್, ವಿ.ಬಿ. ರುದ್ರೇಶ್, ಷಣ್ಮುಖಪ್ಪ, ಎನ್. ಸುರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪಿಎಸ್‌ಐ : ಮರು ಪರೀಕ್ಷೆ ಬೇಡ



ದಾವಣಗೆರೆ,ಮೇ 4- ಪರೀಕ್ಷಾ ಅಕ್ರಮದ ಹಿನ್ನೆಲೆಯಲ್ಲಿ 545 ಪಿ.ಎಸ್.ಐ ಹುದ್ದೆಗೆ ನಡೆದಿರುವ ನೇಮಕಾತಿ ಪರೀಕ್ಷೆಯನ್ನು ರದ್ದು ಮಾಡಿರುವುದು ಸರಿಯಲ್ಲ, ಮರು ಪರೀಕ್ಷೆ ನಡೆಸಲು ತೀರ್ಮಾನಿಸಿರುವುದು ಪ್ರಾಮಾಣಿಕ ಅಭ್ಯರ್ಥಿಗಳಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಹೆಲ್ಪ್‌ಲೈನ್ ರೂರಲ್ ಡೆವಲಪ್‌ಮೆಂಟ್ ಆರ್ಗನೈಜೇಷನ್ ದೂರಿದೆ. ನೇಮಕಾತಿ ಭ್ರಷ್ಟಾಚಾರ ಕುರಿತು ತನಿಖೆ ನಡೆಯುತ್ತಿರುವಾಗಲೇ ಸರ್ಕಾರ ಮರು ಪರೀಕ್ಷೆ ನಿರ್ಧಾರ ಸರಿಯಲ್ಲ. ಹಾಗಾದರೆ ತನಿಖೆ ಏಕೆ ನಡೆಸಬೇಕು. ಮತ್ತೆ ಮರು ಪರೀಕ್ಷೆ ನಡೆದರೆ ಭ್ರಷ್ಟಾಚಾರ ನಡೆಯುವುದಿಲ್ಲ ಎನ್ನುವ ಭರವಸೆ ಯಾರಿಗೂ ಇಲ್ಲ. ಆದ್ದರಿಂದ ಮರು ಪರೀಕ್ಷೆ ನಿರ್ಧಾರ ಕೈಬಿಟ್ಟು, ಭ್ರಷ್ಟಾಚಾರ ಮಾಡಿರುವವರನ್ನು ಬಂಧಿಸಿ, ನೇಮಕಾತಿಯಿಂದ ಹೊರಗಿಟ್ಟು ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ಸಂಘಟನೆ ಕಾರ್ಯದರ್ಶಿ ಆರ್.ಡಿ.ಸುಭಾನ್ ಅವರು ತಹಶೀಲ್ದಾರ್ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಆಗ್ರಹಿಸಿದ್ದಾರೆ.

## ಎಸ್ಟಿ ಪ್ರಮಾಣ ಪತ್ರ ನೀಡಲು ಆಗ್ರಹಿಸಿ ಪ್ರತಿಭಟನೆ




ಜಗಳೂರು, ಮೇ 4- ಪರಿಶಿಷ್ಟ ಪಂಗಡದ ಪಟ್ಟಿಯಿಂದ ನಾಯಕ ಪದ ಬಿಟ್ಟಿರುವುದನ್ನು ಕೂಡಲೇ ನಾಡ ಕಚೇರಿ ಅಂತರ್ಜಾಲದಲ್ಲಿ ಸೇರಿಸಿ, ನಾಯಕ ಜಾತಿಯವರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡಲು ಒತ್ತಾಯಿಸಿ ಇಂದು ತಾಲ್ಲೂಕು ಮ್ಯಾಸಬೇಡ ಬುಡಕಟ್ಟು ಸಂಸ್ಕೃತಿ ರಕ್ಷಣಾ ಸಮಿತಿ ವತಿಯಿಂದ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ನಾಡ ಕಚೇರಿ ಅಂತರ್ಜಾಲದಲ್ಲಿ ಕೈಬಿಟ್ಟಿರುವ ನಾಯಕ ಪದವನ್ನು 15 ದಿನಗಳೊಳಗಾಗಿ ಮೊದಲಿನಂತೆ ನಾಯಕ ಜಾತಿಯವರಿಗೆ ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ನೀಡಬೇಕು. ನಾಯಕ ಪಂಗಡದ ನಿಜವಾದ ಸಮಾನಾರ್ಥಕ 'ಮ್ಯಾಸನಾಯಕ' ಪದವನ್ನು ಸಂವಿಧಾನ ಬಾಹಿರವಾಗಿ ಓಬಿಸಿ ಪಟ್ಟಿಗೆ ಸೇರ್ಪಡೆ ಮಾಡಿರುವುದನ್ನು ಕೂಡಲೇ ತೆಗೆದುಹಾಕಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕು. ಮುಂತಾದ ಬೇಡಿಕೆಗಳನ್ನು ತಕ್ಷಣವೇ ಈಡೇರಿಸಬೇಕು ಎಂದು ಮನವಿಯಲ್ಲಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಮ್ಯಾಸಬೇಡ ಬುಡಕಟ್ಟು ಸಂಸ್ಕೃತಿ ಸಂರಕ್ಷಣಾ ಸಮಿತಿ ತಾಲ್ಲೂಕು ಸಂಚಾಲಕ ಮಂಜುನಾಥ್, ಮುಖಂಡರಾದ ಎ.ಪಾಲಯ್ಯ, ಬೋಸಪ್ಪ, ನಿವೃತ್ತ ಉಪನ್ಯಾಸಕ ರಾಜಣ್ಣ, ಆರ್. ಓಬಳೇಶ್, ಹೆಚ್.ಜಿ. ಲೋಕೇಶ್, ರಾಜಣ್ಣ, ಸಿದ್ದಪ್ಪ, ಸಣ್ಣ ಓಬಯ್ಯ ಮುಂತಾದವರು ಪಾಲ್ಗೊಂಡಿದ್ದರು.

## ಆಕಸ್ಮಿಕ ಬೆಂಕಿ : ಮನೆಯ ಸಾಮಗ್ರಿಗಳು ಭಸ್ಮ



ದಾವಣಗೆರೆ, ಮೇ 4- ನಗರದ ಚೇತನ ಹೋಟೆಲ್ ಆವರಣದಲ್ಲಿನ ಮಳಿಗೆಯೊಂದರಲ್ಲಿ ಇಂದು ಬೆಳ್ಳಂಬೆಳಿಗ್ಗೆ ಬೆಂಕಿ ಅವಘಡ ಸಂಭವಿಸಿದ್ದು, ಮನೆಯ ಸಾಮಗ್ರಿಗಳು ಸಂಪೂರ್ಣ ಸುಟ್ಟು ಕರಕಲಾದ ಘಟನೆ ನಡೆದಿದೆ.

ಮನೆ ಬದಲಾಯಿಸುವ ಸಲುವಾಗಿ ಸಾಮಗ್ರಿಗಳನ್ನು ಮಳಿಗೆಯ ಗೋಡೌನ್ ನಲ್ಲಿ ಸಂಗ್ರಹಿಸಿಡಲಾಗಿತ್ತು. ಫ್ರಿಡ್ಜ್, ಟಿವಿ ಸೇರಿದಂತೆ ವಸ್ತುಗಳನ್ನು ಇಲ್ಲಿ ಇಟ್ಟಿದ್ದು, ಶಾರ್ಟ್ ಸರ್ಕ್ಯೂಟ್ ಸಂಭವಿಸಿದ ಪರಿಣಾಮ ಈ ಅವಘಡ ನಡೆದಿರಬಹುದು ಎಂದು ಶಂಕಿಸಲಾಗಿದೆ.

ಬೆಂಗಳೂರಿಗೆ ಶಿಫ್ಟ್ ಆಗಿದ್ದ ಕುಟುಂಬವೊಂದು ಈ ಗೋಡೌನ್ ನಲ್ಲಿ ಮನೆಯ ಸಾಮಗ್ರಿಗಳನ್ನಿಟ್ಟಿದ್ದು, ತೆಗೆದುಕೊಂಡು ಹೋಗಲು ನಿರ್ಧರಿಸಿತ್ತು. ಆದರೆ ಬೆಂಕಿ ಅನಾಹುತದಿಂದ ಲಕ್ಷಾಂತರ ರೂ. ಹಾನಿ ಆಗಿರಬಹುದು ಎಂದು ಅಂದಾಜಿ ಸಲಾಗಿದೆ. ಇನ್ನು ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಅಧಿಕಾರಿ ಬಸವಪ್ರಭು ಶರ್ಮಾ ನೇತೃತ್ವದ ತಂಡ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದೆ.

## ಹರಪನಹಳ್ಳಿಯಲ್ಲಿ ವಿಜೃಂಭಣೆಯ ಬಸವೇಶ್ವರ ರಥೋತ್ಸವ



ಹರಪನಹಳ್ಳಿ, ಮೇ 4- ಬಸವ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಅಪಾರ ಭಕ್ತರ ಮಧ್ಯೆ ಅತ್ಯಂತ ವೈಭವದಿಂದ ಬಸವೇಶ್ವರ ರಥೋತ್ಸವ ಜರುಗಿತು.

ಸ್ಥಳೀಯ ತೆಗ್ಗಿನ ಮಠದಿಂದ ಕೊಟ್ಟೂರು ರಸ್ತೆಯ ಮೂಲಕ ಪಿ.ಎಲ್.ಡಿ ಬ್ಯಾಂಕ್ ವೃತ್ತದ ಆಂಜನೇಯ ದೇವಸ್ಥಾನದವರೆಗೂ ರಥ ಜರುಗಿತು. ಭಕ್ತರು ಬಾಳೆ ಹಣ್ಣು ಎಸೆದು, ತೆಂಗಿನಕಾಯಿ ಒಡೆದು ಭಕ್ತಿ ಸಮರ್ಪಿಸಿದರು.

**ಅಲಂಕೃತ ರಾಸುಗಳು :** ಅಲಂಕೃತಗೊಂಡ ರಾಸುಗಳು ವಾಲ್ಮೀಕಿ ನಗರ, ಸೊಂಡೂರುಗೇರಿ, ಅಗಸನಕಟ್ಟೆ, ಮೇಗಳಪೇಟೆ ಸೇರಿದಂತೆ ಪಟ್ಟಣದ ವಿವಿಧ ವಾರ್ಡಗಳಿಂದ ರೈತರು ಎತ್ತುಗಳೊಂದಿಗೆ ಸಕಲ ವಾದ್ಯಗಳ ಮೂಲಕ ಕೊಟ್ಟೂರು ರಸ್ತೆಯಲ್ಲಿರುವ ಬಸವೇಶ್ವರ ದೇವಸ್ಥಾನದವರೆಗೂ ಆಗಮಿಸಿ ಪೂಜೆ ಸಲ್ಲಿಸಿದರು. ರಾಸುಗಳು ರಥೋತ್ಸವದ ಮೆರವಣಿಗೆಗೆ ಕಳೆ ತಂದಿದ್ದವು.

ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷ ಎಂ.ರಾಜಶೇಖರ, ಕಾರ್ಯದರ್ಶಿ ಟಿ.ಎಚ್.ಎಂ ಮಲ್ಲಿಕಾರ್ಜುನ, ಶಿವಾನಂದಯ್ಯ, ಸಾವಳಗಿ ನಾಗಣ್ಣ, ಸಾವಳಗಿ ಶಿವರಾಜ, ಟಿ.ಹೆಚ್.ಎಂ. ಹೊಳಿಬಸಯ್ಯ, ವೆಂಕಣ್ಣ, ಎಂ. ಚಂದ್ರಶೇಖರ, ಸಾವಳಗಿ ವಿಶ್ವನಾಥ, ಎಚ್.ಎಂ. ಜಗದೀಶ, ಜೆ.ಓಂಕಾರಗೌಡ, ಹೆಚ್ .ಎಂ.ಮಂಜುನಾಥ ಉಪಸ್ಥಿತರಿದ್ದರು.

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಶ್ರೀಮತಿ ಶೈಲಾ ಇವರ ಜ್ಞಾಪಕಾರ್ಥವಾಗಿ ಹೆಚ್.ಎಂ ದೇವರಾಜ್ ಮತ್ತು ಕುಟುಂಬ ವರ್ಗದವರ ಸೇವಾರ್ಥ.

**KHB ತುಂಗಭದ್ರಾ**
ಬಡಾವಣೆಯಲ್ಲಿ ಕೇವಲ 20 ಲಕ್ಷ ರೂಪಾಯಿಗಳಿಗೆ 30x40 ಅಳತೆಯ ಪೂರ್ವ ಸೈಟನ್ನು ನಿಮ್ಮ ಹೆಸರಿಗೆ ರಿಜಿಸ್ಟ್ರಾರ್ ಮಾಡಿಸಿಕೊಡಲಾಗುವುದು.
82172 14069, 99023 83936

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮನೆ ಮಾರಾಟಕ್ಕೆ**
ಸಿದ್ದವೀರಪ್ಪ ಬಡಾವಣೆ 30×40 ದಕ್ಷಿಣ (20 ವರ್ಷ ಹಳೇದು) 30×40 ದಕ್ಷಿಣ (ಹೊಸ dulpex) 40x60 ಕಮರ್ಷಿಯಲ್, ನಿಜಲಿಂಗಪ್ಪ ಬಡಾವಣೆ MCC 'ಬಿ' ಬ್ಲಾಕ್ 44x60 ಪೂರ್ವ
ಕಿರಣ್ ಬೂಸ್ನೂರ್ : 98440 63409

**ಮನೆ ಬಾಡಿಗೆಗೆ ಇದೆ**
D.No. 3897, 1st Cross, Vidyanagara Main Road, 1st Floor, 60x40 Double Bed Room House. Only for Vegiterian. Davanagere
94484 63388

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇಔಟ್‌ನಲ್ಲಿ 40x60 North, 30x50 North, 30x40 East, 30x40 West, 20x50 West, 20x30 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಗ್ರೀನ್ ಪಾರ್ಕ್ ಹೋಟೆಲ್ ನಲ್ಲಿ ಕೆಲಸ ಮಾಡಲು ಸಪ್ಲೈಯರ್ ಮತ್ತು ವೇಯ್ಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ
72040 20406

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್ ವೇರ್ & ಪೈಂಟ್ಸ್
(Harsha Hardware & Paints)
ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರದ ಎದುರು ರೈಲ್ವೇ ಗೇಟ್ ಹತ್ತಿರ, ದಾವಣಗೆರೆ - 577 001

**TUTION**
For 1st PU & 2nd PU Students Chemistry Tution Available.
By Retd,Prof. U. Guruswamy
# 5183, Nisarga, 10th cross, MCC B Block.
contact no
99720 66772

**ಬೇಲರ್ ದಾರ ದೊರೆಯುತ್ತದೆ**
ದಾವಣಗೆರೆಯ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿರುವ ಅಕ್ಕಿ ಮಳಿಗೆ ಹಿಂಭಾಗದ
ಕುಶಾಲ್ ಎಂಟರ್ ಪ್ರೈಸಸ್
ಮಳಿಗೆ ಸಂಖ್ಯೆ 7 ರಲ್ಲಿ ಭತ್ತ, ರಾಗಿ, ಹುಲ್ಲು ಬಂಡಲ್ ಕಟ್ಟುವ ಬೇಲರ್ ದಾರ ದೊರೆಯುತ್ತದೆ.
ಸಂಪರ್ಕಿಸಿ : ಶಿವರಾಜ್ ಕುಂಕೋದ್
90081 22113

**ಪೂರ್ವಕ್ಕೆ ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್, ಜೆ.ಹೆಚ್ ಪಟೇಲ್ ಬಡಾವಣೆ, ನಿಜಲಿಂಗಪ್ಪ ಲೇಔಟ್‌ನಲ್ಲಿ. ಸಂಪರ್ಕಿಸಿ :
97425 12125

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x74 East, 80x74 East, 30x50 West, 40x43 East, 30x40 West 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**Required**
* 10 to 12 thousand square feet ware house required.
* 3 male candidate Helpers required for vehicle. Education qualification 10th or 12th pass.
91139 24513

**ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು ಮತ್ತು ಮಹಿಳೆಯರು ಆಸಕ್ತಿಯುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿ :
94821 09492, 94807 77338

**ಭವಿಷ್ಯ Astrologer**
ಹಂಪನಾಳ್ ಮೋಡಿ ಮಾಂತ್ರಿಕ ಗಿಡ್ಡಪ್ಪ
ನಂಬಿದಲ್ಲಿ ಮೋಸವಿಲ್ಲ ಭಟ್ಟಂಗಿ ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ.ವಶೀಕರಣ, ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ :
99807 70791

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ.05.05.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಇಂಗ್ಲಿಷ್ ಓದಲು, ಬರೆಯಲು ಬರಬೇಕು. ಹಾಗೂ ಕಂಪ್ಯೂಟರ್ ಜ್ಞಾನವುಳ್ಳವರಾಗಿರಬೇಕು. ಮೂಲ ದಾಖಲಾತಿ ಗಳೊಂದಿಗೆ ಸಂಪರ್ಕಿಸಿ.
Call 98800 42597, 89711 19130
Whatsapp 7019983025

**WANTED TEACHERS**
Walk In interview
PU-TCH / Degree B.Ed Timing : 10.30 Am To 1pm.
UGAM Central School, Davangere.
Contact :
94486 26344, 85499 22048

**English class**
1st std to 9th std
Bruit Abacus and Vedic Maths
Nijalingappa badavane
M: 96201 53806

**ಬೇಕಾಗಿದ್ದಾರೆ**
ಆಯಾಗಳು, GNM / ANM ನರ್ಸ್‌ಗಳು, ವಾರ್ಡ್ ಬಾಯ್ ಬೇಕಾಗಿದ್ದಾರೆ.
ಸಂಪರ್ಕಿಸಿ :
80959 32555

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ : ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
3 BHK ಗ್ರೌಂಡ್ ಫ್ಲೋರ್, ಎಂಸಿಸಿ "ಬಿ" ಬ್ಲಾಕ್, 4ನೇ ಮೇನ್, 4ನೇ ಕ್ರಾಸ್ (ಹಾಸ್ಪಿಟಲ್ ನರ್ಸಿಂಗ್ ಹೋಂ, ಹೋಟೆಲ್ ಮಾಡಲು ಬಾಡಿಗೆಗೆ ಇದೆ)
83101 89690, 98456 47144

**Class Tuitions**
@ sunrise acadamy
Tuitions for SSLC state syllabus and PUC science and commerce 1 st year and 2nd year students. 12 th may NEET / CET coaching from all karnataka expert team limited seat for enrolling name. please contact :
98800 30171, 98804 36414

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**OFFICE SPACE FOR RENT**
860 sqft Suitable for Banks and Corporates
Shamanur Road
89262 68989

**M. E. S little school**
Anjenya extension Admissions open for Pre Nursery, LKG, UKG. Minimum cost, International standard With activities, field trip, fun and more progressive events. Take admissions before 20 th May and have free activity of Education and free camps for details contact :
98800 30171,98804 36414

**WANTED LADY TEACHERS**
B.Ed - 3 Posts, D.ED - 3 Posts. NTC or Any Degree - 3 Posts
Contact : Vidya Vikas Convent
Behind Aarykae Hospital, K.T.J Nagar, Davanagere.
M : 99866 17235

**STAFF REQUIRED**
For PU College
Subjects=computer science & English. Address : JH patel Badavane , Nagnur Road Shamnuru. Contact no :
99168 18369

**EARN EXTRA INCOME PART TIME / FULL TIME BUSINESS OPPORTUNITY**
* In Trending Wellness Industry
* BE Your Own BOSS
* Training Provided from Successful Leaders
* Chance to work with Biggest growing Company in the World
* Your Choice of Investment.
(Interested People)
Contact @ 78294 70947

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**ಬೇಕಾಗಿದ್ದಾರೆ**
ಅಡಿಕೆ ತೋಟದ ಅನುಭವ ಇರುವ ಕುಟುಂಬ ಬೇಕಾಗಿದ್ದಾರೆ.
ಇಚ್ಛೆ ಇರುವವರು ಸಂಪರ್ಕಿಸಿ :
M : 99002 65653

**TO-LET**
Commercial Space 2400 Sft for Rent G+1 with 80ft road facing near RTO office on Kondajji Main road. available in different size suitable for Bank/ATM/Supermarket/Showroom/ Poly clinic/Office/Parlour/GYM/ Studio/Yoga Centre etc.
99864 52968

**Site for Sale**
40 x 70 East - South facing corner site in Basaveshwara Badavane, Davangere is for sale.
Contact :
98867 00886

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
81054 20867

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**ಸೈಟು ಮಾರಾಟಕ್ಕಿದೆ**
ಶಂಕರ ವಿಹಾರ ಬಡಾವಣೆ, ಫ್ಲೈ ಓವರ್ ಹತ್ತಿರ ಬ್ಲಡ್ ಬ್ಯಾಂಕ್ ಹಿಂಭಾಗ, 1ನೇ ಮೇನ್, 5ನೇ ಕ್ರಾಸ್ (ನಂ. 312) ದಕ್ಷಿಣಕ್ಕೆ ರಸ್ತೆ, ಇರುವ ಸೈಟು ಮಾರಾಟಕ್ಕಿದೆ.
ಫೋ. : 98442 36912

**REQUIRED**
Sales Executive, Sales Manager
for : FMG Praducts
Contact : 98441 20003
Shamanur Pharma & Health Care Pvt Ltd.,
374, 4th main, PJ extn., Davangere.

**ಮನೆ ಬಾಡಿಗೆಗೆ /ಲೀಸ್ ಇದೆ**
ಸಿದ್ದವೀರಪ್ಪ ಬಡಾವಣೆ 12 'A' ಕ್ರಾಸ್ #1680/10 ರಲ್ಲಿ 2 ಬೆಡ್ ರೂಂವುಳ್ಳ ಪಶ್ಚಿಮ ಬಾಗಿಲಿನ RCC ಮನೆ ಬೋರ್‌ವೆಲ್, ಮುನ್ಸಿಪಲ್ ನೀರು, AEH ಸೌಕರ್ಯವುಳ್ಳ 15x50 ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ.
94806 67365, 94801 33900

**ಮನೆ ಮಾರಾಟಕ್ಕೆ ಇದೆ**
ಚಿಕ್ಕ ಬೂದಾಳ್‌ನಲ್ಲಿ ಮನೆ ಮಾರಾಟಕ್ಕೆ ಇದೆ.
99027 57300
97405 92589

# ಸಂಘಟನೆ ಮತ್ತು ಸಮಾಜ ಸೇವೆಯೇ ಬೇರೆ, ರಾಜಕೀಯವೇ ಬೇರೆ



## ಹರಪನಹಳ್ಳಿಯಲ್ಲಿ ಆರೋಗ್ಯ ಮೇಳ ಮತ್ತು ರಕ್ತದಾನ ಶಿಬಿರದಲ್ಲಿ ಎಂ.ಪಿ. ವೀಣಾ

ಹರಪನಹಳ್ಳಿ, ಮೇ 4- ಸಂಘಟನೆ ಮತ್ತು ಸಮಾಜ ಸೇವೆ ಬೇರೆ, ರಾಜಕೀಯ ಬೇರೆ ಬೇರೆಯಾಗಿವೆ ಇದನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದಾರೆ ಎಂದು ಎಂ.ಪಿ.ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ.ವೀಣಾ ಹೇಳಿದರು.

ಪಟ್ಟಣದ ರಾಜ ಸೋಮಶೇಖರ ನಾಯಕ ಶಾಲೆಯ ಆವರಣದಲ್ಲಿ ಎಂ.ಪಿ.ಪ್ರಕಾಶ್ ಸಮಾಜ ಮುಖಿ ಟ್ರಸ್ಟ್, ತಥಾಗತ್ ಹಾರ್ಟ್ ಆಸ್ಪತ್ರೆ, ಲಯನ್ಸ್ ಕ್ಲಬ್, ಎಸ್. ಎಸ್. ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ ಎಂ.ಪಿ.ರವೀಂದ್ರ ಜನ್ಮದಿನ ಹಾಗೂ ವಿಶ್ವ ಕಾರ್ಮಿಕ ದಿನಾಚರಣೆಯ ಪ್ರಯುಕ್ತ ಉಚಿತ ಬೃಹತ್ ಆರೋಗ್ಯ ಮೇಳ ಹಾಗೂ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾರು, ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು. ಹಾಗಂತ ಟಿಕೆಟ್ ಸಿಗುವವರೆಗೂ ಸಮಾಜ ಸೇವೆ, ಕೆಲಸ ಮಾಡದೆ ಇರುವುದಕ್ಕೆ ಆಗುವುದಿಲ್ಲ. ನಮ್ಮ ತಂದೆ ದಿ.ಎಂ.ಪಿ. ಪ್ರಕಾಶ್ ಹಾಗೂ ಸಹೋದರ ಎಂ.ಪಿ.ರವೀಂದ್ರ ಅವರೂ ಸಹ ರಾಜಕಾರಣ, ಸಮಾಜ ಸೇವೆ ಹಾಗೂ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದರು, ಅವುಗಳನ್ನು ತಾನು ಮುಂದುವರೆಸಿದ್ದೇನೆ ಎಂದು ವೀಣಾ ತಿಳಿಸಿದರು.

ನೀಲಗುಂದ ಗುಡ್ಡದ ವಿರಕ್ತಮಠ ಸಂಸ್ಥಾನದ ಶ್ರೀ ಚನ್ನಬಸವ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಆಸ್ಪತ್ರೆಗಳು ಜನರ ಆರೋಗ್ಯವನ್ನು ಕಾಪಾಡುತ್ತವೆ. ಈ ನಿಟ್ಟಿನಲ್ಲಿ ರೋಗಿಗಳ ಸೇವೆ ಸಹ ಪೂಜನೀಯ ಕಾರ್ಯವಾಗಿದೆ ಎಂದರು.


ಡಾ.ಮಹಾಂತೇಶ್ ಚರಂತಿಮಠ ಮಾತನಾಡಿ, ಅನೇಕ ಕಾಯಿಲೆಗಳ ತಪಾಸಣೆ ಒಂದೇ ಸೂರಿನಡಿ ಲಭ್ಯವಾಗುವ ನಿಟ್ಟಿನಲ್ಲಿ ಆರೋಗ್ಯ ಮೇಳ ಆಯೋಜಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕೆಪಿಸಿಸಿ ಅಹಿಂದ ಉಪಾಧ್ಯಕ್ಷ ಅಂಬಾಡಿ ನಾಗರಾಜ, ಡಾ.ಸುರೇಶ ಕಣ್ಣನ್ನವರ, ಡಾ.ನಂದಕರ್, ಡಾ.ಶ್ರೀನಿವಾಸ, ಡಾ.ಶೈಲೇಶ್, ಡಾ. ಮಹ್ಮದ್ ಭಾಗವತ್, ಡಾ.ಭಗತ್ ರಾಮು, ಡಾ. ರೂಪೇಶ, ಡಾ.ಮಹೇಶ, ಡಾ.ಶಂಕರಗೌಡ, ಡಾ.ನಾಗಾರ್ಜುನ, ಕಾಂಗ್ರೆಸ್ ಮುಖಂಡ ಬಿ.ಕೆ.ಪ್ರಕಾಶ್, ಕವಿತಾ ವಾಗೀಶ, ಗಾಯಿತ್ರಮ್ಮ, ದಾದಾಪೀರ್, ನಿಚ್ಚವ್ವನಹಳ್ಳಿ ಭೀಮಪ್ಪ, ಡಾ.ಗಿರೀಶ್ ಹಾಗೂ ಇತರರು ಇದ್ದರು.


# 108ರ ಸಂಭ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್



ನಾಲ್ವಡಿ ಕೃಷ್ಣರಾಜ ಒಡೆಯರ್



ಸರ್ ಎಂ. ವಿಶ್ವೇಶ್ವರಯ್ಯ



ಮಿರ್ಜಾ ಇಸ್ಮಾಯಿಲ್

ಕನ್ನಡಿಗರ ಅಭಿಮಾನದ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾದ ರೀತಿ ಒಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ. ಕನ್ನಡ ನಾಡು-ನುಡಿ, ಕಲೆ,ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡಿಗರ ಸಾಂಸ್ಕೃತಿಕ ಬದುಕಿನ ಸಂರಕ್ಷಣೆ, ಸಂವರ್ಧನೆಗಳನ್ನೇ ಮುಖ್ಯ ಆಶಯವನ್ನಾಗಿಟ್ಟುಕೊಂಡು ನಮ್ಮ ಹಿರಿಯರಿಂದ ದಿನಾಂಕ 5-5-1915 ರಲ್ಲಿ ಸ್ಥಾಪನೆಯಾದ ಕನ್ನಡಿಗರ ಪ್ರಾತಿನಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಕನ್ನಡಿಗರ ಬದುಕು ದೊಡ್ಡದಾಗಬೇಕೆಂದು ಕನ್ನಡದ ಬಗ್ಗೆ ಜನರಲ್ಲಿ ಮತ್ತಷ್ಟು ಅಭಿಮಾನ ಮೂಡಿಸಿ, ಕನ್ನಡ ನುಡಿ ಮತ್ತು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಹಂಬಲದಿಂದ ಸ್ಥಾಪಿತವಾಗಿರುವ ಸ್ವಾಯುತ್ತ ಸಂಸ್ಥೆ.

ಭಾಷಾವಾರು ಪ್ರಾಂತ ರಚನೆ ಇನ್ನೂ ಆಗಿರದೆ ಹಲವು ಕಡೆ ಹಂಚಿಹೋಗಿದ್ದ ಕನ್ನಡಿಗರ ಒಟ್ಟುಗೂಡುವಿಕೆಗೆ ಇದೊಂದು ಬಹುದೊಡ್ಡ ಹೆಜ್ಜೆಯೆಂದೇ ಹೇಳಬಹುದು. ಮೈಸೂರು ಪ್ರಾಂತ್ಯದಲ್ಲಿ ಒಡೆಯರ ವಂಶಸ್ಥರು ಆಳುತ್ತಿರುವಾಗಲೇ ಆಗಿನ ಪ್ರಭುಗಳಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಇಂಥ ಸಂಸ್ಥೆಯೊಂದರ ಅವಶ್ಯಕತೆಯನ್ನು ಪೂರೈಸಿದ್ದು ಶ್ಲಾಘನೀಯ.

ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು 1912 ರಲ್ಲಿ ದಿವಾನರಾದರು. ಇವರ ಅಧಿಕಾರವಧಿ 1912 ರಿಂದ 1918, ಈ ಮುಂಚೆ ಸರ್ ಎಂ.ವಿ. ಯವರು ಮೈಸೂರು ಸಂಸ್ಥಾನದ ಚೀಫ್ ಇಂಜಿನಿಯರಾಗಿ 1909 ರಲ್ಲಿ ನೇಮಕಗೊಂಡಿದ್ದರು. ಅನಂತರ ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ 1911 ರಲ್ಲಿ 'ಮೈಸೂರು ಸಂಪದಭಿವೃದ್ಧಿ ಸಮಾಜ' (ಮೈಸೂರು ಇಕನಾಮಿಕ್ ಕಾನ್ಫರೆನ್ಸ್) ಎಂಬ ಸಂಸ್ಥೆಯನ್ನು ಸ್ಥಾಪಿಸಲು ಮಹಾರಾಜರಿಗೆ ಸಲಹೆ ಕೊಟ್ಟಾಗ ಮಹಾರಾಜರು ಅದನ್ನೊಪ್ಪಿ ಅದಕ್ಕನುಸಾರವಾಗಿ ಆ ಸಂಸ್ಥೆಯ ಅಂಗವಾಗಿ 2 (3) ಮೂರು ಸಮಿತಿಗಳು ಏರ್ಪಟ್ಟವು.

1. ಕಾರ್ಖಾನೆಗಳ ಕೈಗಾರಿಕಾ ಸಮಿತಿ
2. ವಿದ್ಯಾ ಸಮಿತಿ
3. ಭೂ ವ್ಯವಸಾಯ ಸಮಿತಿ

ವಿದ್ಯಾ ಸಮಿತಿಗೆ ಹೆಚ್.ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿ, ವಿ. ಸುಬ್ರಹ್ಮಣ್ಯ ಕಾರ್ಯದರ್ಶಿಗಳಾಗಿ ಎರಡು ಯೋಜನೆಗಳನ್ನು ನಿರ್ಧರಿಸಿದರು.

1. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ
2. ಕನ್ನಡ ಅಕಾಡೆಮಿ ಅಥವಾ ಇಂದಿನ ಕನ್ನಡ ಸಾಹಿತ್ಯ ಪರಿಷತ್ತು

ದಿನಾಂಕ 31 ಅಕ್ಟೋಬರ್ 1914 ರಲ್ಲಿ 'ಸಂಪದಭ್ಯುದಯ ಸಮಾಜ ರಾವ್‌ಬಹದ್ದೂರ್ ಎಂ. ಶಾಮರಾವ್, ಕರ್ಪೂರ ಶ್ರೀನಿವಾಸರಾಯರು ಮತ್ತು ಪಿ.ಹೆಚ್. ಅಚ್ಯುತ್‌ರಾವ್ ನೇತೃತ್ವದಲ್ಲಿ ಒಂದು ಉಪ ಸಮಿತಿ ರಚಿಸಲಾಯಿತು. ಇದು 1915 ಮಾರ್ಚ್ 22 ರಂದು ಪ್ರಥಮ ಸಭೆ ಸೇರಿ 'ಕನ್ನಡ ಸಾಹಿತ್ಯ ಸಮ್ಮೇಳನ' ಹಮ್ಮಿಕೊಳ್ಳಬೇಕೆಂದು ನಿರ್ಣಯಿಸಿದರು. ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ನಾಲ್ಕು ದಿನಗಳ ಬೃಹತ್ ಸಮ್ಮೇಳನ ನಡೆಯಿತು. ಹೆಚ್.ವಿ. ನಂಜುಂಡಯ್ಯನವರು ಪ್ರಥಮ ಅಧ್ಯಕ್ಷರಾಗಿ ಅದರ ಘನತೆ, ಗೌರವವನ್ನು ಬಾನೆತ್ತರಕ್ಕೆ ಕೊಂಡೊಯ್ದರು.

ದಿನಾಂಕ 5.5.1915 ರಂದು ನಿಯಮ ನಿಬಂಧನೆಗಳೊಂದಿಗೆ 'ಕರ್ನಾಟಕ ಸಾಹಿತ್ಯ ಪರಿಷತ್ತು' ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬಂದಿತು.

ರಾಜಾಶ್ರಯದಿಂದಲೇ ಬೆಳೆದ ಪರಿಷತ್ತು ಇಂದಿಗೂ ಸಹ ರಾಜ್ಯ ಸರ್ಕಾರದ ಧನ ಸಹಾಯವನ್ನು ಅವಲಂಭಿಸಿದೆ. ಜೊತೆಗೆ ತಾನು ಸಂಪನ್ಮೂಲಗಳನ್ನು ದತ್ತಿ ದೇಣಿಗೆ ಸದಸ್ಯ ಶುಲ್ಕ ಇತ್ಯಾದಿಗಳ ಮೂಲಕ ಕ್ರೋಢೀಕರಿಸಿಕೊಳ್ಳುತ್ತಾ ನಾಡಿನ ಸಾಕ್ಷಿ ಪ್ರಜ್ಞೆಯಾಗಿ ಸಮಗ್ರ ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಲಿದೆ.

ಕನ್ನಡ ಸಾಹಿತ್ಯ ಪರಿಷತ್ತು ಇಂದು ಕನ್ನಡಿಗರ ಒಕ್ಕೂಟವಾಗಿದೆ. ಅದು ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿಗಳಲ್ಲಿ, ಹೊರನಾಡುಗಳಲ್ಲಿ ಘಟಕಗಳನ್ನು ಹೊಂದಿದ್ದು ಈಗಾಗಲೇ ಪ್ರತಿವರ್ಷವೂ ರಾಜ್ಯಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಹಾಗು ಹೋಬಳಿ ಮಟ್ಟಗಳಲ್ಲಿ ಸಮ್ಮೇಳನಗಳನ್ನು, ವಿಚಾರ ಸಂಕಿರಣಗಳನ್ನು, ಕಮ್ಮಟಗಳನ್ನು, ಉಪನ್ಯಾಸ ಮಾಲಿಕೆಗಳನ್ನೂ ನಡೆಸುತ್ತಿದೆ. ವಿವಿಧ ದಾನಿಗಳು ಇಟ್ಟಿರುವ ದತ್ತಿ ಪ್ರಶಸ್ತಿಗಳನ್ನು ಪ್ರತಿ ವರ್ಷ ಅವರ ಆಶಯದಂತೆ ಆಯ್ದ ಕೃತಿಗಳಿಗೆ ಮತ್ತು ಸಂಕಲನಗಳಿಗೆ, ಸಾಹಿತ್ಯ ಸಾಧಕರಿಗೆ ನೀಡಿ ಗೌರವಿಸುತ್ತಾ ಇದೆ.

ನಮ್ಮ ನಾಡಿನ ಹಿರಿಮೆ ಬಹು ವೈಶಿಷ್ಟ್ಯವಾದದ್ದು, ಪ್ರತಿ ಕನ್ನಡಿಗನು ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಕನ್ನಡ ನುಡಿಯು ಕಳೆದು ಹೋಗದಂತೆ ಕಾಪಾಡುವ ದೀಕ್ಷೆ ಹೊಂದಬೇಕು.

ಕರ್ನಾಟಕ ಇತಿಹಾಸದ ಅಂಗವಾಗಿ ಗಂಗರಾಜ್ಯ ಸ್ಥಾಪನೆಯ ಸಂದರ್ಭ ಸ್ಥಾಪಕರಿಗೆ ಅವರ ಧರ್ಮಗುರು 'ಸಿಂಹ ನಂದಿ' ಹೇಳಿದ ಹಿತನುಡಿಗಳು ಇಂದೂ ಪ್ರಸ್ತುತವಾಗಿವೆ.'ಇತ್ತ ವಚನವನ್ನು ನೀವು ಪಾಲಿಸದೆ ಹೋದರೆ ಧರ್ಮಶಾಸನವನ್ನು ನೀವು ಅಲಕ್ಷಿಸಿದರೆ, ಕೀಳಾದವರೊಂದಿಗೆ ನೀವು ಹೊಂದಿಕೊಂಡರೆ, ಅಭಾವವಿರುವವರಿಗೆ ನೀವು ಕೊಡದೇ ಹೋದರೆ, ಸಂಗ್ರಾಮದಲ್ಲಿ ನೀವು ಪಲಾಯನ ಮಾಡಿದರೆ ನಿಮ್ಮ ವಂಶ ಹಾಳಾಗಿ ಹೋಗುವುದು.

ಬಹುಶಃ ಈ ಹಿತನುಡಿಗಳು ಕನ್ನಡದ ಸಂರಕ್ಷಣೆಯ ದೃಷ್ಟಿಯಿಂದ ಕನ್ನಡಿಗರಿಗಾಗಿ ಹೀಗೆ ನಾವು ಹೇಳಬಹುದು. 'ತಾಯಿ ನುಡಿಯಲ್ಲಿ ನೀವು ಆಡದೆ ಹೋದರೆ, ತಾಯಿ ಭಾಷೆಯನ್ನು ನೀವು ಅಲಕ್ಷಿಸಿದರೆ, ಹೊರ ಭಾಷೆಗಳಿಗೆ ಅಧೀನವಾದ 'ಅನ್ಯ ಭಾಷಿಗರಿಗೆ ಕನ್ನಡ ಕಲಿಸದಿದ್ದರೆ; ಕನ್ನಡಕ್ಕಾಗಿ ನಡೆಯುವ ಹೋರಾಟದಲ್ಲಿ ಹಿಂದೆ ಸರಿದರೆ ನಿಮ್ಮ ಭಾಷೆಯ ಪರಂಪರೆ ನಾಶವಾಗಿ ಹೋಗುತ್ತದೆ'.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರುಗಳು ಸ್ವಜನಪಾತ ಮಾಡದೆ ಮನುಷ್ಯ ಜಾತಿ ನಾನೊಂದೇ ವಲಂ ಎಂಬಂತೆ ಬದ್ಧತೆಯಿಂದ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಬೇಕು.



- ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ದಾವಣಗೆರೆ.

## ಜೈನ್ ಕಾಲೇಜಿನಲ್ಲಿ ಕಾರ್ಯಾಗಾರ



ದಾವಣಗೆರೆ, ಮೇ 4 - ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಐಐಸಿ ಅಡಿಯಲ್ಲಿ 'ವ್ಯಾಪಾರ ಪ್ರಾರಂಭಕ್ಕಾಗಿ ಯೋಜಿಸುವುದು ಹೇಗೆ' ಎನ್ನುವ ಕಾರ್ಯಾಗಾರ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಡಿಕೋಡ್ ಪ್ರೈವೇಟ್ ಲಿಮಿಟೆಡ್‌ನ ಸ್ಥಾಪಕರೂ ಆದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪುರವ್ ಕಾಂಬ್ಳೆ ಅವರು ಪಾಲ್ಗೊಂಡು, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ವಿಭಾಗದ ಮುಖ್ಯಸ್ಥರಾದ ಡಾ. ರಾಹುಲ್ ಪಾಟೀಲ್, ವಿಭಾಗದ ಐಐಸಿ ಪದಾಧಿಕಾರಿಗಳಾದ ಎಂ.ಎಸ್. ಕಿರಣ್ ಕುಮಾರ್, ಕೆ.ಎಸ್. ಹರೀಶ್ ಮತ್ತು ಇತರರು ಭಾಗವಹಿಸಿದ್ದರು.

## ಗೋಧಿ ಇಳುವರಿ ಶೇ.5.7 ಇಳಿಕೆ

ನವದೆಹಲಿ, ಮೇ 4 – 2021-22ರಲ್ಲಿ ಗೋಧಿ ಇಳುವರಿ ಶೇ.5.7ರಷ್ಟು ಇಳಿಕೆಯಾಗಿ 105 ದಶಲಕ್ಷ ಟನ್ ಮಾತ್ರ ಆಗಿರಲಿದೆ ಎಂದು ಕೇಂದ್ರ ಸರ್ಕಾರ ಮರು ಅಂದಾಜಿಸಿದೆ. ಈ ಹಿಂದೆ 111.32 ದಶಲಕ್ಷ ಟನ್‌ಗಳ ಇಳುವರಿಯ ನಿರೀಕ್ಷೆ ಇತ್ತು. ಆದರೆ, ಅವಧಿಗೆ ಮೊದಲೇ ಬೇಸಿಗೆ ಆರಂಭವಾಗಿದ್ದರಿಂದ ಇಳುವರಿ ಕುಸಿದಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆಹಾರ ಕಾರ್ಯದರ್ಶಿ ಸುಧಾಂಶು ಪಾಂಡೆ, 2020-21ರಲ್ಲಿ ದೇಶದಲ್ಲಿ ಗೋಧಿ ಉತ್ಪನ್ನ 109.59 ದಶಲಕ್ಷ ಟನ್ ಆಗಿತ್ತು. ಈ ವರ್ಷ 105 ದಶಲಕ್ಷ ಟನ್ ಗೋಧಿ ಇಳುವರಿಯ ನಿರೀಕ್ಷೆ ಇದೆ ಎಂದಿದ್ದಾರೆ. ಇಳುವರಿ ತುಸು ಕಡಿಮೆಯಾದರೂ ಗೋಧಿ ರಫ್ತಿನ ಮೇಲೆ ನಿಯಂತ್ರಣ ಹೇರುವುದಿಲ್ಲ ಎಂದು ಪಾಂಡೆ ಸ್ಪಷ್ಟಪಡಿಸಿದ್ದಾರೆ. 2022-23ರಲ್ಲಿ ಕೇಂದ್ರ ಸರ್ಕಾರ 19.5 ದಶಲಕ್ಷ ಟನ್ ಗೋಧಿ ಖರೀದಿಸುವ ನಿರೀಕ್ಷೆ ಇದೆ. ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಬೆಲೆ ಹೆಚ್ಚಾಗಿರುವುದು ಇದಕ್ಕೆ ಕಾರಣವಾಗಿದೆ.

ಪಿಎಂಜಿಕೆವೈ ಯೋಜನೆಯಡಿ ಗೋಧಿಯ ಬದಲು ಅಕ್ಕಿ ಪೂರೈಸುವ ಸಲುವಾಗಿ ಹೆಚ್ಚುವರಿಯಾಗಿ 55 ಲಕ್ಷ ಟನ್ ಖರೀದಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಪಾಂಡೆ ತಿಳಿಸಿದ್ದಾರೆ. ಪಿಎಂಜಿಕೆವೈ ಯೋಜನೆಯಡಿ ಪಡಿತರಕ್ಕಿಂತ ಹೆಚ್ಚುವರಿ ಯಾಗಿ ಬಡವರಿಗೆ ಧಾನ್ಯ ನೀಡಲಾಗುತ್ತಿದೆ.

## ಹೊನ್ನಾಳಿ : ಇಂದಿನಿಂದ ರಂಗ ಶಿಬಿರ

ಅಭಿನೇತ್ರಿ ನಾಟ್ಯ ಮಂದಿರದ ವತಿಯಿಂದ ಇಲ್ಲಿನ ಹಿರೇಕಲ್ಮಠದಲ್ಲಿ 'ಚಿಣ್ಣರ ಚಾವಡಿ-ಪಾಠವಲ್ಲ ಆಟ' ಶೀರ್ಷಿಕೆಯ ಮಕ್ಕಳ ಸೃಜನಾತ್ಮಕ ರಂಗ ಶಿಬಿರವು ಇಂದಿನಿಂದ ಇದೇ ದಿನಾಂಕ 20ರವರೆಗೆ ನಡೆಯಲಿದೆ. 'ನೀನಾಸಂ'ನ ನುರಿತ ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ತರಬೇತಿ ನೀಡಲಿದ್ದಾರೆ. ನಾಟಕ, ರಂಗಗೀತೆ, ಪ್ರಸಾದನ, ಯಕ್ಷಗಾನ ಪ್ರಾತ್ಯಕ್ಷಿಕೆ, ಮುಖವಾಡ ತಯಾರಿಕೆ, ದೇಸಿ ಆಟಗಳ ಬಗ್ಗೆ ಅರಿವು ಮೂಡಿಸಲಾಗುವುದು. 7ರಿಂದ 16ರ ವಯೋಮಿತಿಯ ಮಕ್ಕಳು ಭಾಗವಹಿಸಬಹುದು ಎಂದು ಶಿಬಿರದ ಸಂಚಾಲಕಿ - ಭರತನಾಟ್ಯ ಮತ್ತು ಸಂಗೀತ ಶಿಕ್ಷಕಿ ಪ್ರತಿಮಾ ನಿಜಗುಣ ಶಿವಯೋಗಿ ತಿಳಿಸಿದ್ದಾರೆ.

## ರಾಜ್ಯಮಟ್ಟದ ಸಂತ ಸಾಹಿತ್ಯ ಅಧ್ಯಯನ ಶಿಬಿರ

ದಾವಣಗೆರೆ ಮೇ 4- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಬರುವ ಜುಲೈ ತಿಂಗಳಲ್ಲಿ ಸಂತ ಸಾಹಿತ್ಯ ಅಧ್ಯಯನ ಶಿಬಿರ ಎಂಬ ರಾಜ್ಯಮಟ್ಟದ 5 ದಿನಗಳ ಕಮ್ಮಟವನ್ನು ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿಯಿರುವ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 27 ಕೊನೆಯ ದಿನವಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್ ಸೈಟ್ sahithyaacademy.Karnataka.gov.in ಯಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ರಿಜಿಸ್ಟ್ರಾರ್ ಕರಿಯಪ್ಪ ಎನ್ ತಿಳಿಸಿದ್ದಾರೆ.

## ನಗರಕ್ಕೆ ಇಂದು ಭೈರತಿ ಬಸವರಾಜ

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ (ಭೈರತಿ) ಅವರು ಇಂದು ರಾತ್ರಿ 8 ಕ್ಕೆ ನಗರಕ್ಕೆ ಆಗಮಿಸಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ನಾಳೆ ಶುಕ್ರವಾರ ಬೆಳಿಗ್ಗೆ 9.30 ಕ್ಕೆ ಹರಿಹರ ತಾಲ್ಲೂಕು ಹರಳಹಳ್ಳಿ ಗ್ರಾಮದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 2.30 ರವರೆಗೆ ದಾವಣಗೆರೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜರುಗುವ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 2.30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

## ಶರಣರ ಆದರ್ಶ ಸಮಾಜ ಪರಿಕಲ್ಪನೆ ಇಂದಿಗೂ ಪ್ರಸ್ತುತ



### ರಾಣೇಬೆನ್ನೂರು ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ

ರಾಣೇಬೆನ್ನೂರು, ಮೇ 4- 12ನೇ ಶತಮಾನದಲ್ಲೇ ಇಡೀ ಜಗತ್ತಿಗೇ ಬಸವಾದಿ ಶರಣರು ವಚನಗಳ ಮೂಲಕ ಬಿತ್ತಿದ ಆದರ್ಶ ಸಮಾಜ ಪರಿಕಲ್ಪನೆ ಇಂದಿಗೂ ಪ್ರಸ್ತುತ. ಜಗತ್ತು ಇಂದು ಎದುರಿಸುತ್ತಿರುವ ಹೆಚ್ಚಿನ ಸಮಸ್ಯೆಗಳಿಗೆ ಶರಣರ ವಚನಗಳಲ್ಲಿ ಪರಿಹಾರವಿದೆ ಎಂದು ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ ಹೇಳಿದರು.

ಇಲ್ಲಿಯ ಬೀರೇಶ್ವರ ನಗರದಲ್ಲಿ ಶ್ರೀ ಮಂಜುನಾಥ ಅಭಿಮಾನಿಗಳ ಸಂಘದ ವತಿಯಿಂದ ಈಚೆಗೆ ಏರ್ಪಡಿಸಿದ್ದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಕವೇ ಕೈಲಾಸ ಎಂಬ ಮಹೋನ್ನತ ಆದರ್ಶವನ್ನು ಇಡೀ ಜಗತ್ತಿಗೇ ನೀಡಿದ ಬಸವೇಶ್ವರರು, ಸಾಮಾಜಿಕ ಕ್ರಾಂತಿಯ ಹರಿಕಾರರಾಗಿ ಸಮಾಜ ಸುಧಾರಕರಾಗಿ ಸೇವೆ ಸಲ್ಲಿಸಿದರು. ಬಸವೇಶ್ವರರ ಆದರ್ಶ, ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು. ಮುಖಂಡ ಮಂಜುನಾಥ ಗೌಡಶಿವಣ್ಣನವರ, ಕುಬೇರಪ್ಪ ಕೊಂಡಜ್ಜಿ, ರವಿ ಮಾಕನೂರು, ಕರಿಯಪ್ಪ ಶಿಡಗನಾಳ, ಚಂದ್ರು ಬುರಡಿಕಟ್ಟಿ, ಸತ್ಯನಾರಾಯಣ ಅಂಗಡಿ, ರಾಕೇಶ ಮೇಡ್ಲೇರಿ, ಸಂಕಪ್ಪ ಪೂಜಾರ ಉಪಸ್ಥಿತರಿದ್ದರು.

## ಗುರುತು ಖಚಿತವಾಗದೇ ಪಿಂಚಣಿ ವಿಳಂಬ

### ರಕ್ಷಣಾ ಇಲಾಖೆ ನಿವೃತ್ತ ನೌಕರರಿಗೆ ತಕ್ಷಣವೇ ಪಿಂಚಣಿ ಬಿಡುಗಡೆ ಮಾಡಲು ಕ್ರಮ

ನವದೆಹಲಿ, ಮೇ 4 – ಬ್ಯಾಂಕುಗಳು ಏಪ್ರಿಲ್ 30ರ ಒಳಗೆ ಕೆಲ ಭದ್ರತಾ ಪಿಂಚಣಿದಾರರ ಗುರುತು ಖಚಿತ ಪಡಿಸಲು ಸಾಧ್ಯವಾಗದ ಕಾರಣ 58,275 ಜನರ ಪಿಂಚಣಿ ವಿಳಂಬವಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ತಿಳಿಸಿದೆ.

ಪಿಂಚಣಿದಾರರ ಸಂಕಷ್ಟ ನಿವಾರಿಸುವ ಸಲುವಾಗಿ ಮೇ 25ರವರೆಗೆ ಇವರ ಗುರುತು ಖಚಿತ ಪಡಿಸಲು ಅವಕಾಶ ನೀಡಲಾಗುವುದು ಎಂದು ಸಚಿವಾಲಯ ಹೇಳಿದೆ. ಏಪ್ರಿಲ್ ತಿಂಗಳ ಅವರ ಪಿಂಚಣಿ ಹಣವನ್ನು ಬುಧವಾರದ ಒಳಗೆ ಖಾತೆಗಳಿಗೆ ಜಮಾ ಮಾಡಲಾಗುವುದು ಎಂದು ತಿಳಿಸಲಾಗಿದೆ. ಬ್ಯಾಂಕುಗಳು ಪ್ರತಿ ವರ್ಷ ನವೆಂಬರ್ ಒಳಗೆ ಪಿಂಚಣಿದಾರರ ಗುರುತು ಖಚಿತ ಪಡಿಸಿಕೊಳ್ಳುತ್ತದೆ. ಆದರೆ, ಕೊರೊನಾ ಕಾರಣದಿಂದಾಗಿ ಈ ಅವಧಿಯನ್ನು ಸರ್ಕಾರ ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿತ್ತು.

## ನಗರದಲ್ಲಿ ಇಂದು 28-37ನೇ ವಾರ್ಡ್ ಕಾಂಗ್ರೆಸ್ ಸಭೆ

ಮಹಾನಗರ ಪಾಲಿಕೆಯ 28 ಮತ್ತು 37ನೇ ವಾರ್ಡ್‌ಗಳಿಗೆ ಮೇ 20 ರಂದು ಉಪಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಆಕಾಂಕ್ಷಿಗಳು, ಸ್ಥಳೀಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯನ್ನು ಕರೆಯಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರ ಸೂಚನೆ ಮೇರೆಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಸಂಜೆ 5 ಗಂಟೆಗೆ ಸಭೆ ನಡೆಯಲಿದೆ.

## ನಗರದಲ್ಲಿ ಇಂದು ಕಸಾಪ ಸಂಸ್ಥಾಪನಾ ದಿನಾಚರಣೆ



ಸರ್ವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿನ 108 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಕುವೆಂಪು ಕನ್ನಡ ಭವನದಲ್ಲಿ ಇಂದು ಪೂರ್ವಾಹ್ನ 11 ಗಂಟೆಗೆ ಆಚರಿಸಲಾಗುವುದೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಜಿಲ್ಲಾ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಜಂಟಿ ಸಹಭಾಗಿತ್ವದಲ್ಲಿ ನಡೆಯುವ ಈ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ವಹಿಸುವರು. ಉದ್ಘಾಟನೆಯನ್ನು ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ ಸುರೇಶ್ ನೆರವೇರಿಸುವರು. 'ಕನ್ನಡ ಮನಸ್ಸುಗಳ ಮೇಲೆ ಕಸಾಪ ಬೀರಿದ ಪ್ರಭಾವ' ವಿಷಯದ ಮೇಲೆ ಬೆಂಗಳೂರಿನ ಲೇಖಕರೂ ಆದ ಕನ್ನಡಪರ ಚಿಂತಕ ಕೆ. ರಾಜಕುಮಾರ್ ಅವರು ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ ಆಗಮಿಸುವರು. ಕನ್ನಡ ನಾಡು, ನುಡಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಿಷತ್‌ನ ಆಜೀವ ಸದಸ್ಯರು, ಕನ್ನಡಾಭಿಮಾನಿಗಳು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ ಮನವಿ ಮಾಡಿದ್ದಾರೆ.

## ಚನ್ನಗಿರಿಯಲ್ಲಿ ಇಂದು ಕಸಾಪ ಸಂಸ್ಥಾಪನಾ ದಿನಾಚರಣೆ

ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಚನ್ನಗಿರಿಯ ನಿವೃತ್ತ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಪುರಸಭೆಯ ಅಧ್ಯಕ್ಷರಾದ ಲಕ್ಷ್ಮಿದೇವಮ್ಮ ನರಸಿಂಹಮೂರ್ತಿ ನೆರವೇರಿಸಲಿದ್ದು, 'ಕನ್ನಡ ಮನಸ್ಸುಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ ಬೀರಿದ ಪ್ರಭಾವ' ಎಂಬ ವಿಷಯ ಕುರಿತು ಸಾಹಿತಿ ಎಂ.ಆರ್.ಲೋಕೇಶ್ವರಯ್ಯ ಉಪನ್ಯಾಸ ನೀಡಲಿದ್ದಾರೆ.

ತಾಲ್ಲೂಕು ಕಸಾಪ ಅಧ್ಯಕ್ಷ ಬಸವಾಪಟ್ಟಣದ ಎಲ್.ಜಿ.ಮಧುಕುಮಾರ್ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಯು.ಚನ್ನಬಸಪ್ಪ, ಪುರಸಭೆ ಸದಸ್ಯ ಪರಮೇಶ್ವರಪ್ಪ ಪಾರಿ ಆಗಮಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕನ್ನಡ ಪರಿಚಾರಕರಾದ ಜಿ.ಚಿನ್ನಸ್ವಾಮಿ ಅವರನ್ನು ಸನ್ಮಾನಿಸಲಾಗುವುದು.

## ಎಸ್‌ಐ ಹಗರಣ : ಸಿಬಿಐಗೆ ವಹಿಸಿ

ದಾವಣಗೆರೆ, ಮೇ 4- ಎಸ್.ಐ. ಅಕ್ರಮ ನೇಮಕಾತಿ ಹಗರಣವನ್ನು ರಾಜ್ಯ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅಥವಾ ಸಿಬಿಐ ತನಿಖೆಗೆ ವಹಿಸುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ವಕ್ತಾರ ಡಿ.ಬಸವರಾಜ್ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಗರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವ ಡಾ.ಅಶ್ವತ್ಥ್‌ನಾರಾಯಣ ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ. ಮಂಜುನಾಥ್, ಕೆ.ಹೆಚ್. ವಿಜಕುಮಾರ್, ಬಿ.ಶಿವಕುಮಾರ್ ಉಪಸ್ಥಿತರಿದ್ದರು.

# ಅಂಬಾನಿಗೆ ಬೆದರಿಕೆ ಪ್ರಕರಣ: ಮಾಜಿ ಪೊಲೀಸ್ ಅಧಿಕಾರಿಯಿಂದ ಹಿರನ್ ಹತ್ಯೆ ಸಂಚು

ಮುಂಬೈ, ಮೇ 4 - ಥಾಣೆಯ ಉದ್ಯಮಿ ಮನ್‌ಸುಖ್ ಹಿರನ್ ಹತ್ಯೆಯ ಸಂಚಿನ ಪ್ರಮುಖ ರೂವಾರಿ ಮಾಜಿ ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮ ಎಂದು ಬಾಂಬೆ ಹೈಕೋರ್ಟ್ ಎದುರು ಎನ್.ಐ.ಎ. ತಿಳಿಸಿದೆ.

ದೇಶದ ಪ್ರಮುಖ ಉದ್ಯಮಿ ಮುಕೇಶ್ ಅಂಬಾನಿ ಅವರ ಕುಟುಂಬವನ್ನು ಬೆದರಿಸುವ ಸಂಚು ನಡೆಸಲಾಗಿದ್ದು, ಆ ಸಂಚಿನಲ್ಲಿ ದುರ್ಬಲ ಕೊಂಡಿಯಾಗಿದ್ದ ಮನ್‌ಸುಖ್ ಹತ್ಯೆ ಮಾಡಲಾಗಿದೆ ಎಂದು ಎನ್.ಐ.ಎ. ಹೇಳಿದೆ.

ಶರ್ಮ ಹಾಗೂ ಪ್ರಕರಣದ ಇತರೆ ಆರೋಪಿಗಳು ಪೊಲೀಸ್ ಆಯುಕ್ತರ ಕಚೇರಿಯ ಆವರಣದಲ್ಲಿ ಹಲವು ಸಭೆಗಳನ್ನು ನಡೆಸಿದ್ದರು. ಅಲ್ಲಿಯೇ ಹತ್ಯೆಯ ಸಂಚು ರೂಪಿಸಲಾಗಿತ್ತು. ಹಿರನ್ ಹತ್ಯೆ ಮಾಡಿದವರಿಗೆ ಹಣ ನೀಡುವ ಸಲುವಾಗಿ ವಜಾಗೊಂಡ ಪೊಲೀಸ್ ಅಧಿಕಾರಿ ಸಚಿನ್ ವಾಜೆಯು ಶರ್ಮಾಗೆ 45 ಲಕ್ಷ ರೂ. ನೀಡಿದ್ದ ಎಂದು ನ್ಯಾಯಾಲಕ್ಕೆ ತಿಳಿಸಲಾಗಿದೆ.

ಶರ್ಮ ಅಮಾಯಕನಲ್ಲ. ಅಪರಾಧಿಕ ಸಂಚು, ಹತ್ಯೆ ಹಾಗೂ ಉಗ್ರವಾದಿ ಕೃತ್ಯಗಳಲ್ಲಿ ಭಾಗಿಯಾಗಿದ್ದಾನೆ. ಹೀಗಾಗಿ ಜಾಮೀನು ನೀಡಬಾರದು ಎಂದು ಎನ್.ಐ.ಎ. (ರಾಷ್ಟ್ರೀಯ ತನಿಖಾ ದಳ) ಮನವಿ ಮಾಡಿಕೊಂಡಿದೆ. ನ್ಯಾಯಮೂರ್ತಿ ಗಳಾದ ಎ.ಎಸ್. ಚಂದುರ್ಕರ್ ಹಾಗೂ ಜಿ.ಎ. ಸನಪ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ಪ್ರಕರಣದ ವಿಚಾರಣೆ ನಡೆಸುತ್ತಿದ್ದು, ಮುಂದಿನ ವಿಚಾರಣೆಯನ್ನು ಜುಲೈ 17ಕ್ಕೆ ನಿಗದಿ ಪಡಿಸಿದೆ.

2021ರ ಫೆಬ್ರವರಿ 25ರಂದು ಸ್ಫೋಟಕ ತುಂಬಿದ್ದ ಎಸ್.ಯು.ವಿ. ಒಂದು ಕೈಗಾರಿಕೋದ್ಯಮಿ ಮುಕೇಶ್ ಅಂಬಾನಿ ಅವರ ಅಂಟಿಲಿಯಾ ನಿವಾಸದ ಬಳಿ ಪತ್ತೆಯಾಗಿತ್ತು. ನಂತರ ಈ ಎಸ್.ಯು.ವಿ. ಹೊಂದಿದ್ದ ಹಿರನ್ ಅವರ ಮೃತದೇಹ ಥಾಣೆ ಬಳಿಯ ಕಮರಿ ಯಲ್ಲಿ ಮಾರ್ಚ್ 5ರಂದು ಪತ್ತೆಯಾಗಿತ್ತು. ಅಂಬಾನಿ ಕುಟುಂಬ ಸೇರಿದಂತೆ ಹಲವರನ್ನು ಬೆದರಿಸುವ ಸಂಚಿನಲ್ಲಿ ಭಾಗಿಯಾಗಿದ್ದ ತಂಡದಲ್ಲಿ ಶರ್ಮ ಸಕ್ರಿಯ ಸದಸ್ಯ. ಸಂಚಿನಲ್ಲಿ ದುರ್ಬಲ ಕೊಂಡಿಯಾಗಿದ್ದ ಮನ್‌ಸುಖ್ ಹಿರನ್ ಹತ್ಯೆ ಮಾಡಲಾಗಿತ್ತು ಎಂದು ಎನ್.ಐ.ಎ. ತಿಳಿಸಿದೆ.

ಅಂಬಾನಿ ಕುಟುಂಬಕ್ಕೆ ಬೆದರಿಕೆ ಹಾಕುವ ಇಡೀ ಸಂಚಿನ ಬಗ್ಗೆ ಹಿರನ್‌ಗೆ ಗೊತ್ತಿತ್ತು. ಹಿರನ್ ಸತ್ಯ ಬಯಲು ಮಾಡಬಹುದು ಎಂಬ ಆತಂಕ ಶರ್ಮ ಹಾಗೂ ವಾಜೆಗೆ ಇತ್ತು.

ಸತ್ಯ ಬಯಲಿಗೆ ಬಂದರೆ ತಮಗೆ ಸಂಚಿನ ಪ್ರತಿಫಲ ಸಿಗದೇ ಹೋಗಬಹುದು ಎಂಬ ಕಳವಳ ಇತ್ತು ಎಂದು ಎನ್.ಐ.ಎ. ಹೇಳಿದೆ. ಮಾಜಿ ಎನ್‌ಕೌಂಟರ್ ಪರಿಣಿತ ಶರ್ಮಾನನ್ನು ಎನ್.ಎ.ಎ. ಜೂನ್ 17, 2021ರಂದು ಬಂಧಿಸಿತ್ತು. ಆರೋಪಿ ಈಗ ನ್ಯಾಯಿಕ ಬಂಧನದಲ್ಲಿದ್ದಾನೆ.

## ಎಲ್.ಐ.ಸಿ. ಐ.ಪಿ.ಒ. : ಮೊದಲ ದಿನ ಶೇ.66ರ ಬೇಡಿಕೆ

ನವದೆಹಲಿ, ಮೇ 4 – ದೇಶದ ಅತಿ ದೊಡ್ಡ ವಿಮಾ ಕಂಪನಿಯಾಗಿರುವ ಎಲ್.ಐ.ಸಿ.ಯ ಷೇರುಗಳ ಮಾರಾಟದ ಮೊದಲ ದಿನ ಪಾಲಿಸಿದಾರರು ಹಾಗೂ ಉದ್ಯೋಗಿಗಳಿಂದ ಹೆಚ್ಚಿನ ಬೇಡಿಕೆ ಬಂದಿದೆ. ಈ ವಲಯದಲ್ಲಿ 1.9 ಪಟ್ಟು ಹೆಚ್ಚಿನ ಬೇಡಿಕೆ ವ್ಯಕ್ತವಾಗಿದೆ. ಆದರೆ, ಒಟ್ಟಾರೆ ಬೇಡಿಕೆ ಶೇ.66 ಮಾತ್ರವಾಗಿದೆ. ಸಾಂಸ್ಥಿಕ ಹಾಗೂ ಸಾಂಸ್ಥಿಕೇತರ ಹೂಡಿಕೆದಾರರಿಂದ ಬೇಡಿಕೆ ಕಡಿಮೆ ಇದೆ. ಸಾಂಸ್ಥಿಕೇತರ ವಲಯದಲ್ಲಿ ಶೇ.26 ಮತ್ತು ಸಾಂಸ್ಥಿಕ ವಿಭಾಗದಲ್ಲಿ ಶೇ.33ರ ಬೇಡಿಕೆ ಕಂಡು ಬಂದಿದೆ.


ಎಲ್.ಐ.ಸಿ. ಷೇರಿನ ಬೆಲೆಯನ್ನು 902-949 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಅರ್ಹ ಉದ್ಯೋಗಿಗಳು ಪ್ರತಿ ಷೇರಿಗೆ 45 ರೂ. ಹಾಗೂ ಪಾಲಿಸಿದಾರರು 60 ರೂ. ವಿನಾಯಿತಿ ಪಡೆಯುತ್ತಾರೆ.

ಈ ಮೊದಲು ಎಲ್.ಐ.ಸಿ.ಯ ಶೇ.5ರಷ್ಟು ಷೇರುಗಳನ್ನು ಮಾರಲು ಉದ್ದೇಶಿಸಲಾಗಿತ್ತು. ನಂತರ ಮಾರುಕಟ್ಟೆ ಪರಿಸ್ಥಿತಿ ಗಮನಿಸಿ ಶೇ.3.5ರ ಷೇರುಗಳನ್ನು ಮಾತ್ರ ಮಾರುವುದಾಗಿ ತಿಳಿಸಲಾಗಿತ್ತು.

## ಮುರುಘಾಮಠದಲ್ಲಿ ಕಲ್ಯಾಣ ಮಹೋತ್ಸವ

ಚಿತ್ರದುರ್ಗದ ಮುರುಘಾ ಮಠದಲ್ಲಿ ಇಂದು ಬೆಳಗ್ಗೆ 10.30 ಕ್ಕೆ ಸಾಮೂಹಿಕ ಕಲ್ಯಾಣ ಮಹೋತ್ಸವವು ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಶ್ರೀ ಮಹಾಂತ ಸ್ವಾಮೀಜಿ (ಶ್ರೀ ಗುರು ಮೂಕಪ್ಪ ಶಿವಯೋಗಿಗಳ ಮಠ, ತಿಪ್ಪಾಯಿಕೊಪ್ಪ) ಗೌರವ ಉಪಸ್ಥಿತಿ ವಹಿಸುವರು.


## ಹಾರ್ದಿಕ ಅಭಿನಂದನೆಗಳು



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಆನೆಕೊಂಡ ದಾವಣಗೆರೆ.
ಇದರ ಅಧ್ಯಕ್ಷಸ್ಥಾನ ತೆರವುಗೊಂಡಿದ್ದು, ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ದಿ. 04.05.2022 ರಂದು ನಡೆಸಿದ್ದು, ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ರಾಂಪುರದ
**ಶ್ರೀಯುತ ಆರ್.ಜಿ.ಚಂದ್ರಪ್ಪನವರು**
ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿಯ ಸರ್ವಸದಸ್ಯರ, ಒಮ್ಮತದ ಮೇರೆಗೆ ಆಯ್ಕೆ ಮಾಡಲಾಗಿದೆ.

ಇವರಿಗೆ ಶುಭ ಕೋರುವವರು :
**ಸಂಘದ ಎಲ್ಲಾ ಪದಾಧಿಕಾರಿಗಳು, ಆನೆಕೊಂಡ (ಬಸಾಪುರ)**
**ಆರ್.ಜಿ. ಬಸವರಾಜ್, ರಾಂಪುರ.**
**ಆರ್.ಎಂ. ಕೆಂಚಪ್ಪ, ರಾಂಪುರ.**
**ಫೋನ್ : 63634 57097**

# ಬಸವ ಜಯಂತಿಗೆ ಕಳೆ ತಂದ ಬೃಹತ್ ಮೆರವಣಿಗೆ





ದಾವಣಗೆರೆ, ಮೇ 4- 110ನೇ ಬಸವ ಜಯಂತಿ ಉತ್ಸವದ ಅಂಗವಾಗಿ ಬುಧವಾರ ನಗರದಲ್ಲಿ ಬೃಹತ್ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.

ಮಧ್ಯಾಹ್ನ 3.15ರ ಸುಮಾರಿಗೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಹರಿಹರ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಬಸವ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ನೇತೃತ್ವದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಮೆರವಣಿಗೆಯ ಆರಂಭದಲ್ಲಿ ಬಸವಣ್ಣನ ಮೂರ್ತಿ ಹೊತ್ತ ಗಜರಾಜ ಗಾಂಭೀರ್ಯದಿಂದ ನಡೆಯುತ್ತಿದ್ದರೆ, ವಿವಿಧ ಬಗೆಯ ಗೊಂಬೆಗಳು, ಚಂಡೆ ಕುಣಿತ, ಕುದುರೆ ಕುಣಿತ, ನಂದಿಕೋಲು, ಮಹಿಳೆಯರ ಹಾಗೂ ಪುರುಷರ ಡೊಳ್ಳು ಕುಣಿತ ಮೆರವಣಿಗೆಗೆ ಮೆರುಗು ನೀಡಿದ್ದವು.

ಮತ್ತೊಂದೆಡೆ ಬಸವಣ್ಣ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ, ಗಂಗಾಂಬಿಕೆ ಮುಂತಾದ ಶಿವಶರಣರ ವೇಷ ತೊಟ್ಟ ಪುಟಾಣಿಗಳು.

ಮೈಸೂರು ಮಹಾರಾಜರು, ಭಾರತಾಂಬೆ, ರಾಣಿಚೆನ್ನಮ್ಮ, ಒನಕೆ ಓಬವ್ವ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀಜಿ, ಅಂಬೇಡ್ಕರ್, ನೆಹರು ಅವರ ವೇಷ ತೊಟ್ಟ ಪುಟಾಣಿಗಳ ಟ್ರ್ಯಾಕ್ಟರ್‌ಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಐರಣಿ ಚಂದ್ರು ಹಾಗೂ ಸಂಗಡಿಗರು ಟ್ರ್ಯಾಕ್ಟರ್‌ನಲ್ಲಿ ಕುಳಿತು ಹಾಡು ಹೇಳುತ್ತಾ ಮೆರವಣಿಗೆಗೆ ಸಾಥ್ ನೀಡಿದರು.

ಬಿರು ಬಿಸಿಲಿನ ನಡುವೆಯೂ ಡೊಳ್ಳಿನ ಸದ್ದಿಗೆ ಯುವಕರು ಕುಣಿದು ಕುಪ್ಪಳಿಸುತ್ತಿದ್ದರು. ಮೆರವಣಿಗೆ ಆರಂಭದಲ್ಲಿ ಮಹಿಳೆಯರೂ ನೃತ್ಯಕ್ಕೆ ಹೆಜ್ಜೆ ಹಾಕಿದರು. ಗೊಂಬೆಗಳು ಹಾಗೂ ಕಲಾ ತಂಡಗಳೊಂದಿಗೆ ಜನರು ಸೆಲ್ಫಿ ತೆಗೆಸಿಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್ ಹಾಗೂ ಇತರರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ವಿರಕ್ತ ಮಠದಿಂದ ಹೊರಟ ಮೆರವಣಿಗೆಯು ಹೊಂಡದ ವೃತ್ತ, ಅರುಣಾ ವೃತ್ತ, ಪಿ.ಬಿ. ರಸ್ತೆ, ಜಯದೇವ ವೃತ್ತದ ಮೂಲಕ ಶಿವಯೋಗಾಶ್ರಮ ತಲುಪಿತು. ಜಯದೇವ ವೃತ್ತದಲ್ಲಿ ಚಿತ್ರದುರ್ಗ ಮುರುಘಾ ಶರಣರು ಮೆರವಣಿಗೆ ವೀಕ್ಷಿಸಿದರು.

## ಶ್ಯಾಮ್‌ರಿಂದ ಮಹಾರಾಜರ ಭೇಟಿ



ದಾವಣಗೆರೆ, ಮೇ 4 - ತಾಲ್ಲೂಕಿನ ಕೋಲ್ಕುಂಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೈಸೂರು ಮಹಾರಾಜ ಯದು ವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರನ್ನು ಮಾಯಕೊಂಡ ಕ್ಷೇತ್ರದ ಬಿಜೆಪಿ ಕಾರ್ಯದರ್ಶಿ ಜಿ.ಎಸ್. ಶ್ಯಾಮ್ ಭೇಟಿ ಮಾಡಿ ಪರಿಚಿತಗೊಂಡರು.

ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಡೆದ ಶಿಲಾ ಶಾಸನ ಪ್ರತಿಕೃತಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಾರಾಜರನ್ನು ಭೇಟಿ ಮಾಡಿದ ಶ್ಯಾಮ್ ಅವರು ತಾನು ರಾಜಕೀಯದಲ್ಲಿ ಮೊದಲ ಹೆಜ್ಜೆ ಇಡುತ್ತಿರುವುದಾಗಿ ಮನದಾಳವನ್ನು ಹಂಚಿಕೊಂಡರು.

ಆತ್ಮೀಯವಾಗಿ ಮಾತನಾಡಿದ ಮಹಾರಾಜರು, ನಿಮ್ಮಂತಹ ಯುವ ಉತ್ಸಾಹಿಗಳು ರಾಜಕೀಯಕ್ಕೆ ಬರಬೇಕು. ಮಹಾರಾಜರ ಕಾಲದಲ್ಲಿ ಹೇಗೆ ಜನರ ಕ್ಷೇಮಾಭ್ಯುದಯಕ್ಕಾಗಿ ಶ್ರಮಿಸುತ್ತಿದ್ದರೋ ಹಾಗೆಯೇ ನೀವು ಸಹ ಸ್ಪರ್ಧಿಸುವ ಕ್ಷೇತ್ರದ ಜನರ ಅಭ್ಯುದಯಕ್ಕೆ ಶ್ರಮಿಸುವಂತೆ ಸಲಹೆ ನೀಡಿದರು. ಮಹಾರಾಜರ ಸಲಹೆಯಿಂದ ಮತ್ತಷ್ಟು ಚೈತನ್ಯಗೊಂಡ ಶ್ಯಾಮ್ ಅವರು ಜನರ ಏಳಿಗೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ಹೇಳಿದರು.

## ವೀರಶೈವ ಮಹಾಸಭಾದಿಂದ ಮಾಲಾರ್ಪಣೆ



ದಾವಣಗೆರೆ, ಮೇ 4- ನಗರದಲ್ಲಿ ಇಂದು ನಡೆದ ಬಸವ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಸಿದ್ದೇಶ್ ಕರೇಶಿವಪ್ಪ ಅವರು ಶ್ರೀ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿದರಲ್ಲದೇ, ಮೆರವಣಿಗೆಯ ನೇತೃತ್ವ ವಹಿಸಿದ್ದ ಶ್ರೀ ಬಸವ ಪ್ರಭು ಸ್ವಾಮೀಜಿಯವರನ್ನು ಗೌರವಿಸಿದರು.

ಜಿಲ್ಲಾ ಯುವ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ಬಸವಕುಮಾರ್, ಗಿರೀಶ್ ದೇವರಮನೆ, ನವೀನ್ ನಲವಾಡಿ, ಮನು ಗೋಪಾನಾಲ್, ಕಾರ್ತಿಕ್ ಹಿರೇಮಠ್ ಮತ್ತಿತರರು ಉಪಸ್ಥಿತರಿದ್ದರು.

## ಬೈಕ್-ಲಾರಿ ನಡುವೆ ಡಿಕ್ಕಿ ಅಜ್ಜ, ಅಜ್ಜಿ, ಮೊಮ್ಮಗಳ ಸಾವು

ದಾವಣಗೆರೆ, ಮೇ 4- ಬೈಕ್ ಮತ್ತು ಲಾರಿ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಅಜ್ಜ, ಅಜ್ಜಿ, ಮೊಮ್ಮಗಳು ಸಾವಿಗೀಡಾಗಿರುವ ಘಟನೆ ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಕುಂದುವಾಡ ಗ್ರಾಮದ ಬಳಿ ಇಂದು ಸಂಭವಿಸಿದೆ. ಶಿವಮೊಗ್ಗದ ಜಬಿ (58) ಶಿವಮೊಗ್ಗ, ಇವರ ಪತ್ನಿ ಅಬಿದಾಬಿ (55) ಮೊಮ್ಮಗಳಾದ ಗೌಸಿಯಾ (ಮೂರುವರೆ ವರ್ಷ) ಮೃತಪಟ್ಟ ದುರ್ದೈವಿಗಳು ಎಂದು ಗುರುತಿಸಲಾಗಿದೆ.

ಈ ಮೂವರು ಬೈಕ್‌ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಬೈಕ್ ಸ್ಕಿಡ್ ಆಗಿ ಲಾರಿ ಚಕ್ರದಡಿ ಸಿಲುಕಿದ ಕಾರಣ ಅಬಿದಾಬಿ ಮತ್ತು ಗೌಸಿಯಾ ಸ್ಥಳದಲ್ಲಿಯೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಜಬಿಯನ್ನು ನಗರದ ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ.

ಸ್ಥಳಕ್ಕೆ ದಕ್ಷಿಣ ಸಂಚಾರಿ ಮತ್ತು ವಿದ್ಯಾನಗರ ಪೊಲೀಸ್ ಠಾಣೆಯವರು ಆಗಮಿಸಿ ಪರಿಶೀಲನೆ ನಡೆಸಿದರು. ಅಪಘಾತ ನಡೆದ ಬಳಿಕ ಸ್ಥಳೀಯ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿ, ಹೈವೇ ರಸ್ತೆಯ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಅಪಘಾತ ನಡೆದಿದೆ. ಇದಕ್ಕೆ ಹೆದ್ದಾರಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಾಮಗಾರಿಯನ್ನು ಬೇಗನೇ ಮಾಡಿ ಮುಗಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

## ಯುಬಿಡಿಟಿಯನ್ನು ಸರ್ಕಾರದ ಸುಪರ್ದಿಗೆ ನೀಡಲು ಮನವಿ

ದಾವಣಗೆರೆ, ಮೇ 4- ಯುಬಿಡಿಟಿ ಕಾಲೇಜನ್ನು ವಿಟಿಯು ದುರಾಡಳಿತದಿಂದ ಮುಕ್ತಗೊಳಿಸಿ, ಸರ್ಕಾರದ ಸುಪರ್ದಿಗೆ ನೀಡಬೇಕೆಂದು ವಿಟಿಯು ಉಪ ಕುಲಪತಿ ಡಾ. ಕರಿಸಿದ್ದಪ್ಪ ಅವರಿಗೆ ವೈಬಿಜಿಬಿ ವತಿಯಿಂದ ಮನವಿ ಸಲ್ಲಿಸಲಾಗಿದೆ.

ನಗರದ ಯುಬಿಡಿಟಿ ಕಾಲೇಜಿಗೆ ವಿಟಿಯು ಉಪ ಕುಲಪತಿ ಡಾ.ಕರಿಸಿದ್ದಪ್ಪ ಇಂದು ಭೇಟಿ ನೀಡಿ ಆತುರದಲ್ಲಿಯೇ ಹೊರಟರು. ಈ ನಡುವೆ ತಮ್ಮ ಮನವಿ ಸ್ವೀಕರಿಸಿ ಚರ್ಚಿಸದೆ ಹೊರಟು ಹೋಗಿದ್ದಾಗಿ ವೈಬಿಜಿಬಿ ಅಧ್ಯಕ್ಷ ನಾಗರಾಜ್ ಸುರ್ವೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ರಾಜ್ಯದಲ್ಲಿರುವ ಸರ್ಕಾರ 40% ಕಮೀಷನ್ ಸರ್ಕಾರ

### ಹರಪನಹಳ್ಳಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್



ಹರಪನಹಳ್ಳಿ, ಮೇ 4- ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಲೂಟಿಕೋರ ಸರ್ಕಾರ, 40% ಕಮೀಷನ್ ಸರ್ಕಾರ. ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬುಧವಾರ ಪಟ್ಟಣದಲ್ಲಿ ನಡೆದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಬಿಜೆಪಿ ಸರ್ಕಾರದಲ್ಲಿ ಆಗುತ್ತಿರುವ ಭ್ರಷ್ಟಾಚಾರ ನೋಡಿ ರಾಜ್ಯದ ಜನರು ಭ್ರಮ ನಿರಸರಾಗಿದ್ದಾರೆ. ಬಿಜೆಪಿ ಆಪರೇಷನ್ ಕಮಲದ ಮೂಲಕ ಹಣದಿಂದ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರಕ್ಕೆ ಯಾವುದೇ ಬದ್ಧತೆ ಇಲ್ಲ. ಸರ್ಕಾರ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇವತ್ತು ರಾಜ್ಯದಲ್ಲಿ ಪಿಎಸ್‌ಐ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರದ ಮಂತ್ರಿ ಅಶ್ವತ್ಥ್ ನಾರಾಯಣ್ ಹೆಸರು ಕೇಳಿ ಬರುತ್ತಿದ್ದು, ಕೂಡಲೇ ಮುಖ್ಯಮಂತ್ರಿ ಸಚಿವ ಅಶ್ವತ್ಥ್ ನಾರಾಯಣ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆ ಚುರುಕಾಗಿದೆ. ಈಗಾಗಲೇ ಸುಮಾರು 76 ಸಾವಿರ ಸದಸ್ಯತ್ವ ಮಾಡಿಸಲಾಗಿದೆ. ಬೂತ್ ಮಟ್ಟದಲ್ಲಿ ಕಮಿಟಿ ರಚನೆ ಮಾಡಿ, ಪಕ್ಷ ಸಂಘಟನೆಗೆ ಒತ್ತು ನೀಡಲಾಗಿದೆ. ಬರುವ ವಿಧಾನಸಭಾ ಚುನಾವಣೆಯಲ್ಲಿ ಹರಪನಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದ್ದು, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹರಪನಹಳ್ಳಿ ಕ್ಷೇತ್ರದ ಕಾಂಗ್ರೆಸ್‌ನಲ್ಲಿ ಸಣ್ಣಪುಟ್ಟ ಗೊಂದಲ, ಭಿನ್ನಾಭಿಪ್ರಾಯಗಳಿರುವುದು ಹೈಕಮಾಂಡ್ ಮತ್ತು ಕೆಪಿಸಿಸಿ ಗಮನಕ್ಕಿದೆ. ಇಲ್ಲಿನ ಎಲ್ಲಾ ಸಮಸ್ಯೆಗಳನ್ನು ಶೀಘ್ರದಲ್ಲಿ ಬಗೆಹರಿಸುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಕೆಪಿಸಿಸಿ ಮಾಧ್ಯಮ ವಕ್ತಾರ ಡಿ. ಬಸವರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ವೈ. ರಾಮಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ಕೆ. ಪ್ರಕಾಶ, ಪುರಸಭೆ ಸದಸ್ಯರಾದ ಡಿ.ಅಬ್ದುಲ್ ರಹಿಮಾನ್ ಸಾಬ್, ಎಂ.ವಿ. ಅಂಜಿನಪ್ಪ, ಲಾಟಿ ದಾದಾಪೀರ್, ಟಿ. ವೆಂಕಟೇಶ, ಗೊಂಗಡಿ ನಾಗರಾಜ್, ಪುರಸಭೆ ಮಾಜಿ ಸದಸ್ಯರಾದ ಜಾವೀದ್, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಹರಿಯಮ್ಮನಹಳ್ಳಿ ಶಿವರಾಜ, ಮುಖಂಡರಾದ ಎಸ್.ಕೆ. ಖಾಲೀದ್ ಉಪಸ್ಥಿತರಿದ್ದರು.

### ದ್ವಿತೀಯ ಪಿಯು ವಿದ್ಯಾರ್ಥಿ ಸಂಶಯಾಸ್ಪದ ಸಾವು ಪ್ರಕರಣ

## ಎಫ್‌ಎಸ್‌ಎಲ್‌ಗೆ ಸಾಕ್ಷ್ಯಗಳು : ವರದಿ ನಂತರ ನಿಖರತೆ ಸ್ಪಷ್ಟ

ದಾವಣಗೆರೆ, ಮೇ 4- ದ್ವಿತೀಯ ಪಿಯುಸಿ ವಿದ್ಯಾರ್ಥಿ ಸಂಶಯಾಸ್ಪದವಾಗಿ ಸಾವಿಗೀಡಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆತನ ಕೊಠಡಿಯ ಪುಸ್ತಕದಲ್ಲಿ ಸಿಕ್ಕಿದ್ದ ಡೆತ್‌ನೋಟ್ ಸೇರಿದಂತೆ, ಇತರೆ ಸಾಕ್ಷಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿದ್ದು, ವರದಿ ಬಂದ ನಂತರ ಸಾವಿನ ನಿಖರ ಕಾರಣ ತಿಳಿಯಲಿದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದರು.

ನಗರದ ಪಿಸಾಳೆ ಕಾಂಪೌಂಡ್‌ನ ವಾಸಿ, ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಬೇಕಿದ್ದ ವಿದ್ಯಾರ್ಥಿ ತಮ್ಮ ಮನೆಯ ಬಳಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದ. ಈ ಹಿನ್ನೆಲೆಯಲ್ಲಿ ಡೆತ್‌ನೋಟ್ ಸೇರಿದಂತೆ ಸಾಕ್ಷ್ಯಗಳನ್ನು ಎಫ್‌ಎಸ್‌ಎಲ್‌ಗೆ ಕಳಿಸಲಾಗಿದೆ ಎಂದು ತಮ್ಮ ಕಚೇರಿಯಲ್ಲಿ ಇಂದು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಹೆಚ್ಚಾಗಿವೆ. ಡೆತ್‌ನೋಟ್‌ನಲ್ಲಿರುವ ಬರಹ, ಅಕ್ಷರಗಳು ತಮ್ಮ ಮಗನ ಕೈಬರಹಗಳೆಂಬುದನ್ನು ಮೃತನ ತಂದೆ ಗುರುತಿಸಿದ್ದಾರೆ. ವಿದ್ಯಾರ್ಥಿಯು ಸಾವನ್ನಪ್ಪುವ ಮುಂಚೆ ಗೂಗಲ್‌ನಲ್ಲಿ ಕೆಲವು ವಿಷಯಗಳ ಬಗ್ಗೆ ಶೋಧ ನಡೆಸಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದರು.

ಪರೀಕ್ಷೆಗೆ ಓದಿಕೊಳ್ಳಲೆಂದು ಮಹಡಿಗೆ ಹೋಗಿದ್ದ ವಿದ್ಯಾರ್ಥಿಯು ತಾನು ಮಲಗಿದ್ದಲ್ಲೇ ಕೈ ಕೊಯ್ದುಕೊಂಡು ಕೊಠಡಿ ತುಂಬಾ ಓಡಾಡಿ, ಕಡೆಗೆ ಮೇಲಿನಿಂದ ಬಿದ್ದು ಸಾವನ್ನಪ್ಪಿರುವ ಸಾಧ್ಯತೆ ಇದೆ. ಮೇಲ್ನೋಟಕ್ಕೆ ಇದು ಆತ್ಮಹತ್ಯೆಯೆಂದು ಕಂಡು ಬಂದರೂ ಎಫ್‌ಎಸ್‌ಎಲ್ ವರದಿ ಬಂದ ನಂತರವೇ ಸ್ಪಷ್ಟವಾಗಲಿದೆ ಎಂದರು.

## ನಗರದಲ್ಲಿ ನಾಳೆ ಶಂಕರ ಜಯಂತಿ



ದಾವಣಗೆರೆ, ಮೇ 4- ಶ್ರೀ ಶಂಕರ ಜಯಂತಿ ಪ್ರಯುಕ್ತ ನಗರದ ಶ್ರೀ ಜಯ ದೇವ ವೃತ್ತದಲ್ಲಿರುವ ಕೂಡಲೀ ಶಂಕರ ಮಠದಲ್ಲಿ ನಾಡಿದ್ದು ದಿನಾಂಕ 6 ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಮಠದ ಅರ್ಚಕ ಪವನ್ ಭಟ್ ತಿಳಿಸಿದ್ದಾರೆ.

## ಸಭಾಪತಿ ಹೊರಟ್ಟಿ ಪ್ರವಾಸ

ದಾವಣಗೆರೆ ಮೇ 4 - ಕರ್ನಾಟಕ ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರು ನಾಡಿದ್ದು ದಿನಾಂಕ 6 ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, ಬೆಳಿಗ್ಗೆ 11 ಕ್ಕೆ ಹರಿಹರ ತಾಲ್ಲೂಕು ಹೊಸಳ್ಳಿ ಗ್ರಾಮದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಹಾವೇರಿಗೆ ಪ್ರಯಾಣ ಬೆಳೆಸುವರು.

# ಇಬ್ಬರು ಅಂತರ್ ರಾಜ್ಯ ಕಳ್ಳರ ಸೆರೆ: 21 ಲಕ್ಷ ರೂ. ವಶ



ದಾವಣಗೆರೆ, ಮೇ 4- ಗಮನ ಬೇರೆಡೆ ಸೆಳೆದು ಹಣ ದೋಚುತ್ತಿದ್ದ ಇಬ್ಬರು ಅಂತರ್ ರಾಜ್ಯ ಕಳ್ಳರನ್ನು ಬಂಧಿಸಿರುವ ಇಲ್ಲಿನ ವಿದ್ಯಾನಗರ ಪೊಲೀಸರು, ಬಂಧಿತರಿಂದ 21 ಲಕ್ಷ ರೂ. ನಗದು ವಶಪಡಿಸಿಕೊಂಡಿದ್ದಾರೆ.

ಚೆನ್ನೈ ಮೂಲದ ನರೇಶ್ ಹಾಗೂ ಬೆಳಗಾವಿ ಗಡಿಭಾಗ ಲೋಂಡಾದ ಮೊಹಮ್ಮದ್ ಹುಸೇನ್ ಅಲಿಯಾಸ್ ಮುಲ್ಲಾ ಬಂಧಿತ ಆರೋಪಿಗಳು.

ಸ್ಥಳೀಯ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಮನ ಬೇರೆಡೆ ಸೆಳೆದು ಲಕ್ಷಾಂತರ ರೂ. ನಗದು ದೋಚಿ ಪರಾರಿಯಾದ ಬಗ್ಗೆ 2 ಪ್ರಕರಣಗಳು ವರದಿಯಾಗಿದ್ದವು. ಆರೋಪಿತರ ಪತ್ತೆಗಾಗಿ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್, ಡಿಸಿಎಆರ್ ಬಿ ಘಟಕದ ಅಧಿಕಾರಿ ಮತ್ತು ಸಿಬ್ಬಂದಿಗಳಾದ ಎಂ. ಆಂಜನಪ್ಪ, ಕೆ.ಸಿ.ಮಜೀದ್, ಕೆ.ಟಿ. ಆಂಜನೇಯ, ಡಿ. ರಾಘವೇಂದ್ರ, ಯು.ಮಾರುತಿ, ಪಿ. ಸುರೇಶ್, ಜೆ.ಹೆಚ್.ಆರ್. ನಟರಾಜ್, ಈ.ಬಿ. ಅಶೋಕ, ಆರ್.ರಮೇಶ್ ನಾಯ್ಡ್, ಬಸವರಾಜ್, ಸಿ.ಎಸ್. ಬಾಲರಾಜ್, ಸಿ. ಮಲ್ಲಿಕಾರ್ಜುನ್, ಅರುಣಕುಮಾರ್ ಒಳಗೊಂಡ ತಂಡವನ್ನು ರಚಿಸಲಾಗಿತ್ತು.

ಈ ತಂಡವು ಆರೋಪಿತರ ಪತ್ತೆಗಾಗಿ ಚೆನ್ನೈ, ಬೆಳಗಾವಿ, ಓ.ಜಿ. ಕುಪ್ಪಂ, ಬೆಳಗಾವಿಯ ಗಡಿಭಾಗದ ಲೋಂಡಾ, ಬೆಂಗಳೂರು ಮುಂತಾದ ಕಡೆಗಳಲ್ಲಿ ತಿರುಗಾಡಿ ಮಾಹಿತಿ ಕಲೆ ಹಾಕಿದ್ದು, ಖಚಿತ ಮಾಹಿತಿ ಆಧರಿಸಿ ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಆರೋಪಿಗಳನ್ನು ಸೆರೆ ಹಿಡಿದಿದ್ದಾರೆ. ವಿಚಾರಣೆಗೊಳಪಡಿಸಿದಾಗ ದಾವಣಗೆರೆ ವಿದ್ಯಾನಗರ ಪೊಲೀಸ್ ಠಾಣೆಯ 2 ಪ್ರಕರಣಗಳಲ್ಲಿ ಒಟ್ಟು 6 ಲಕ್ಷ ಹಣ, ಹರಿಹರ ನಗರ ಪೊಲೀಸ್ ಠಾಣೆಯ 1 ಪ್ರಕರಣದಲ್ಲಿ 2 ಲಕ್ಷ ರೂ ಹಣ ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ ಪೊಲೀಸ್ ಠಾಣೆಯ 1 ಪ್ರಕರಣದಲ್ಲಿ 13 ಲಕ್ಷ ಹಣ ಎಲ್ಲಾ ಸೇರಿ 4 ಪ್ರಕರಣಗಳಲ್ಲಿ ಒಟ್ಟು 21 ಲಕ್ಷ ರೂ. ನಗದು ಹಣವನ್ನು ದೋಚಿದ್ದಾಗಿ ಒಪ್ಪಿಕೊಂಡಿದ್ದರು ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಮ್ಮ ಕಚೇರಿಯಲ್ಲಿ ಇಂದು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ನಾನಾ ರೀತಿಯಲ್ಲಿ ಹಣ ಲೂಟಿ:** ಹಾನಗಲ್ ಠಾಣೆ ಪ್ರಕರಣದಲ್ಲಿ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸುವ ವೇಳೆ ಕಾರಿನಲ್ಲಿದ್ದ 13 ಲಕ್ಷ ಹಣವನ್ನು ಆರೋಪಿಗಳು ಲಪಟಾಯಿಸಿದ್ದಾರೆ. ಬ್ಯಾಂಕ್ ಗಳಲ್ಲಿ ಹಣ ಬಿಡಿಸಿಕೊಳ್ಳಲು ಬರುವ ವಯಸ್ಸಾದವರು, ಒಂಟಿಯಾಗಿ ಬರುವವರನ್ನು ಗಮನಿಸಿ, ಅವರು ಹಣ ಡ್ರಾ ಮಾಡಿ ಹೊರ ಬಂದಾಗ ಅವರ ಬಳಿ ಇರುವ ಹಣ ದೋಚುವುದು, ರಸ್ತೆಯಲ್ಲಿ ನೋಟು ಬಿಸಾಕಿ ಅತ್ತ ಗಮನ ಸೆಳೆದು, ಹಣ ಲಪಟಾಯಿಸುವುದು ಹಾಗೂ ಅವರವರೇ ಹೊಡೆದಾಡಿಕೊಂಡು ಗಮನ ಸೆಳೆದು ಹಣ ಕಿತ್ತುಕೊಳ್ಳುವ ವಿಧಾನಗಳನ್ನು ಬಳಸಿದ್ದಾರೆ. ಈ ಗ್ಯಾಂಗ್ ನ ಕೆಲವರು ತಲೆಮರೆಸಿ ಕೊಂಡಿದ್ದು, ಪತ್ತೆಗಾಗಿ ಶೋಧ ಕಾರ್ಯ ಸಾಗಿದೆ. ಇದೇ ರೀತಿ ಬೇರೆ ಬೇರೆ ಕಡೆಗಳಲ್ಲಿ ಮಾಡಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಎಸ್ಪಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಡಿವೈಎಸ್‌ಪಿ ಬಿ.ಎಸ್. ಬಸವರಾಜ್ ಇದ್ದರು.


ಪುಣ್ಯಸ್ಮರಣೆ



ಜನನ : 08.06.1936

ನಿಧನ : 05.05.2015

ಲಿಂ|| ಶರಣ ಶಾಮನೂರು ಬಕ್ಕೇಶಪ್ಪನವರು

ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು....
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀಮತಿ ಶಾಂತಮ್ಮ ಬಕ್ಕೇಶಪ್ಪ ಶಾಮನೂರು
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಸಹೋದರರು, ಸಹೋದರಿಯರು
ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte